ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭಾಪತಿಗಳೇ, ಇದುವರೆಗೂ ಕೂಡ ನನ್ನ ಮಿತ್ರರನೇಕರು ಈ ಜೈಲುಗಳ ಸುಧಾರಣೆಯ ಬಗ್ಗೆ ಮತ್ತು ಜೈಲುಗಳಲ್ಲಿ ಈಗ ನಡೆಯುತ್ತಿರುವ ಕೈಗಾರಿಕೆಯ ಉದ್ಯಮಗಳ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ನಾನಾದರೂ ಈ ವಿಚಾರದಲ್ಲಿ ಹೇಳುವುದಿಷ್ಟೆ. ಸಾಧಾರಣವಾಗಿ ಈ ದಿವಸ ಈ ಜೈಲುಗಳನ್ನು ನಡೆಸತಕ್ಕ ಬಗ್ಗೆ ಜೈಲುಗಳ ಆಡಳಿತಕ್ಕಾಗಿ ಮತ್ತು ಈ ವಾರ್ಪಾಡುಗಳ ಬಗ್ಗೆ ಮತ್ತು ಅಲ್ಲಿಯ ಕೈಗಾರಿಕೆ ಬಗ್ಗೆ ಈವರೆಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿರುತ್ತೇವೆ. ಆದರೆ ಈ ಬಾಬಿನಿಂದ ಬರತಕ್ಕ ಪ್ರತಿಫಲವಾದರೋ ಬಹಳ ಕಡಮೆ. ಈ ದಿವಸ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ Discharged Prisoners Aided Society ಎಂಬ ಒಂದು ಸೊಸೈಟಿಯಿದೆ. ಇದಕ್ಕೆ ಪ್ರತಿ ವರ್ಷವೂ ಎರಡು ಸಾವಿರ ರೂಪಾಯಿಗಳನ್ನು ಕೊಡಲಾಗುತ್ತದೆ. ಹೀಗೆ 10-20 ವರ್ಷಗಳಿಂದಲೂ ಇದಕ್ಕೆ ಸರ್ಕಾರದವರು ಹಣವನ್ನೊದಗಿಸುತ್ತಿದ್ದಾರೆ. ಈ ಸೊಸೈಟಿಯಲ್ಲಿ 25 ಜನ ಷೇರ್ ಹೋಲ್ಡರುಗಳಿರಬಹುದು. ಅದರಲ್ಲಿ 15 ಜನ ಡೈರೆಕ್ಟರುಗಳಿದ್ದಾರೆ. ಆದರೆ ಈ ಸೊಸೈಟಿಯಿಂದ ಇಲ್ಲಿಯವರೆಗೂ ಎರಡು ಮೂರು ಸಾವಿರ ರೂಪಾಯಿಗಳ ಸಾಲವನ್ನೇನಾದರೂ ಕೊಟ್ಟಿದ್ದಾರೆಯೋ ಅಥವಾ ಇಲ್ಲವೋ ಗೊತ್ತಾಗುತ್ತಿಲ್ಲ. ಹೀಗೆ 10-20 ವರ್ಷಗಳಿಂದ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದಾಗ್ಯೂ ಅದರಿಂದ ಜನರಿಗೆ ಮೂರುಕಾಸಿನ ಪ್ರಯೋಜನ ಕೂಡ ಆಗದೆ ಇದ್ದರೆ ನೀವು ಏತಕ್ಕೆ ಅಂಥ ಬಾಬುಗಳಿಗೆ ದುಡ್ಡನ್ನು ಖರ್ಚು ಮಾಡಬೇಕು? ಇದರಿಂದ ಆ ಜೈಲಿನಿಂದ ಹೊರಗೆ ಬಂದಂಥ ಅಪರಾಧಿ ಮನುಷ್ಯನಿಗೆ ಏನಾದರೂ ಹಣದ ಸಹಾಯ ದೊರೆತಂತಾಯಿತೇ? ಈಗ ಆಲ್ ಇಂಡಿಯ ವೆಲ್‌ಫೇರ್ ಸೊಸೈಟಿಯೆಂಬ ಸಂಸ್ಥೆಯೊಂದಿದೆ. ಇದಕ್ಕೆ ಡೈರೆಕ್ಟರಾಗಿರತಕ್ಕವರು ಡಿಲ್ಲಿ-ಅಗ್ರ ಇತ್ಯಾದಿ ಸ್ಥಳಗಳಲ್ಲಿ ನಡೆಯತಕ್ಕ ಕಾನ್ಫರೆನ್ಸ್ ಗಳಿಗೆಂದು ಆಗಾಗ ಹೋಗುತ್ತಾರೆ. ಅದರಿಂದ ಆಗುತ್ತಿರುವ ಪ್ರಯೋಜನವೇನೆಂದರೆ ಈ ಡೈರೆಕ್ಟರಾಗಿರತಕ್ಕವರು ಡೆಲ್ಲಿ-ಅಗ್ರ ಇತ್ಯಾದಿ ಯಾತ್ರೆಗಳನ್ನು ಮುಗಿಸಿಕೊಳ್ಳಲು ಅನುಕೂಲವಾಗಿದೆ, ಅಷ್ಟೇ ಹೊರತು ಮತ್ತೇನೂ ಪ್ರಯೋಜನವಿಲ್ಲ. ಆದ್ದರಿಂದ ಇದನ್ನು ನಿಲ್ಲಿಸಿ ಬಿಡುವುದು ಉತ್ತಮ. ಈ ಸೊಸೈಟಿ ದಕ್ಷತೆಯಿಂದ ಕೆಲಸ ನಡೆಸುತ್ತಿಲ್ಲ. ಅಷ್ಟೇ ಅಲ್ಲದೆ ಇದಕ್ಕೆ ವರ್ಷೇ ವರ್ಷೇ ಎರಡು ಸಾವಿರ ರೂಪಾಯಿಗಳು ಬೇರೆ ದಂಡವಾಗಿ ಖರ್ಚಾಗುತ್ತಿದೆ. ಇದನ್ನು ತಪ್ಪಿಸುವುದೇ ಒಳ್ಳೆಯದು.

ಇನ್ನು ಜೈಲಿನಲ್ಲಿ ನಡೆಯುತಕ್ಕ ಕೈಗಾರಿಕೆಯ ವಿಚಾರಕ್ಕೆ ಬಂದರೆ—ಗಾರ್ಬಾರ್ಪ್ಲಾಂಟ್ ಎಂದು ಒಂದು ಮೆಷನರಿಯನ್ನು 43 ಸಾವಿರ ರೂಪಾಯಿಗಳು ಕೊಟ್ಟು ಕೊಂಡು ಕೊಂಡು ಬಂದಿದ್ದಾರೆಂದು ಹೇಳಿದರು. ಈ ಯಂತ್ರದಲ್ಲಿ ಕೆಲಸಮಾಡತಕ್ಕ ಕೂಲಿಗಳಿಗೆ ದಿನಂ ಒಂದಕ್ಕೆ ಒಂದಾಣೆ ಒಂದೂವರೆಯಾಣೆ ಬರುತ್ತದೆ. ಜೈಲಿನಲ್ಲಿದ್ದ ಅಪರಾಧಿ ಜೈಲಿನಿಂದ ಹೊರಗಡೆಗೆ ಬಂದ ನಂತರ ಅವನು 43ಸಾವಿರ ರೂಪಾಯಿಗಳನ್ನು ಕೊಟ್ಟು ಅಂತಹ ಯಂತ್ರವನ್ನು ತರುವುದಕ್ಕಾಗುವುದಿಲ್ಲ ಮತ್ತು ಅವನು ಆ ಯಂತ್ರದಲ್ಲಿ ಕೆಲಸಮಾಡಲೂ ಸಾಧ್ಯವಿಲ್ಲ. ಜೈಲಿನಲ್ಲಿರತಕ್ಕ ಕಾಲದಲ್ಲಿ ಈ ಕೈಗಾರಿಕೆಯಲ್ಲಿ ನಿರತರಾದವರಿಗೆ ಬರತಕ್ಕ ಕೂಲಿ 1 ಅಣೆ ಅಥವಾ ಒಂದೂವರೆ ಆಣೆ, ಆದರೆ ಜೈಲಿನಿಂದ ಹೊರಗೆ ಬಂದ ಮೇಲೆ ಅವರು ಬಾಕಿ ಕೆಲಸಕಾರ್ಯಗಳಿಗೆ ಕೂಲಿಹೋದರೆ ದಿನಕ್ಕೆ 1-2 ರೂಪಾಯಿಗಳ ಕೂಲಿಸಿಕ್ಕುತ್ತದೆ. ಆದುದರಿಂದ ಈಗ ಸರ್ಕಾರದವರು ತರಿಸಿರತಕ್ಕ ಗಾರ್ಬಾರ್ಪ್ಲಾಂಟಿನಿಂದ ಏನೂ ಪ್ರಯೋಜನವಿಲ್ಲ. ಇದನ್ನು ಯಾರಿಗಾದರೂ ಮಾರಿಬಿಡಿ, ಇಲ್ಲವೇ ಸ್ಕ್ರಾಪ್‌ಮಾಡಿ ಹರಾಜು ಹಾಕಿಬಿಡಿ. ಇದಕ್ಕೇಕೆ ಇಷ್ಟು ಹಣ ಖರ್ಚುಮಾಡಬೇಕು? ಇದಕ್ಕೆ ಎಲೆಕ್ಟ್ರಿಕ್ ಕರೆಂಟ್ ಬೇರೆ ದಂಡ. ಇಂಥ ಒಂದು ಲಾಭದಾಯಕವಲ್ಲದ ಉದ್ಯಮವೇಕೆ ಇರಬೇಕೋ ನನಗಂತೂ ಹೊಳೆಯುತ್ತಿಲ್ಲ. ಇದಕ್ಕೆ ಸಿಬ್ಬಂದಿ ವೆಚ್ಚ ಬೇರೆ. ಇನ್ನು ಬ್ಯಾಂಬೋ ರಟ್ಟನ್ ಎಷ್ಟೋ ವರ್ಷಗಳಿಂದ ಅಲ್ಲೇ ಸ್ಟಾಕ್‌ಬಿದ್ದಿದೆ. ಅಲ್ಲಿ ಆ ಕೆಲಸ ಮಾಡುವಂಥ ಜನಗಳಿದ್ದಾಗೂ ಆ ಸಾಮಾನುಗಳನ್ನು ತಯಾರಿಸುತ್ತಿಲ್ಲ. ಹೀಗಾಗಿ ಈ ದಿವಸ ಜೈಲಿನಲ್ಲಿರತಕ್ಕ ಖೈದಿಗಳಿಗೆ ಸರಿಯಾಗಿ ಯಾವ ಒಂದು ಕೈಗಾರಿಕೆಯನ್ನೂ ಕಲ್ಪಿಸಿದಂತಾಗಲಿಲ್ಲ. ಈಗಾಗಲೇ ಶ್ರೀ ಜೆ.ಬಿ. ಮಲ್ಲಾರಾಧ್ಯರವರು ತಿಳಿಸಿದಂತೆ ಜೈಲಿನಲ್ಲಿರತಕ್ಕ ಖೈದಿಗಳಿಗೆ ಅವರು ಅಲ್ಲಿಂದ ಹೊರಗೆ ಬಂದ ಅನಂತರ ಯಾವ ಕೈಗಾರಿಕೆಗಳನ್ನು ಸುಲಭವಾಗಿ ಕೈಗೊಳ್ಳಲು ಅವಕಾಶವಿರುತ್ತೆಂದು ಕಂಡು ಬರುತ್ತದೋ ಅಂಥ ಕೈ ಕೆಲಸಗಳನ್ನು ಅವರಿಗೆ ಕಲಿಸ ಬೇಕಾದ್ದು ಮುಖ್ಯ. ಆದರೆ ಈ ದಿವಸ ಖೈದಿಗಳಾಗಿರುವಾಗ ಜನರಿಗೆ ಒಳಗೂ ಒಂದು ಸರಿಯಾದ ಉದ್ಯೋಗ ಕಲಸದೆ ಹೋದರೆ ಅವರು ಹೊರಗೆ ಬಂದ ಮೇಲೆ ಕಷ್ಟತಪ್ಪಲು ಅವಕಾಶವೆಲ್ಲಿದೆ? ಇನ್ನು ಜೈಲಿನ ಆಡಳಿತದ ವಿಚಾರವನ್ನು ತೆಗೆದುಕೊಂಡರೆ ಅಲ್ಲಿ ಒಂದು ದೊಡ್ಡ ಟೀಕ್‌ಮರದ ಲಾಟು ಕಾಂಪೌಂಡ್‌ನಲ್ಲಿ ಇತ್ತು. ಈ ದಿವಸ ಈ ಸಾಗುವಾನಿ ಮರದ ಬೆಲೆ ಹೇಗಿದೆ ಎಂಬುದು ಮಾನ್ಯ ವ್ಯವಸಾಯದ ಮಂತ್ರಿಗಳಿಗೆ ಗೊತ್ತಿದೆ. ಈ ದಿವಸ ತೇಗದಮರದ ಬೆಲೆ ಬಹಳ ಜಾಸ್ತಿಯಾಗಿದೆ. ಆದರೆ ಅಲ್ಲಿ ಕಾಂಪೌಂಡ್‌ನಲ್ಲಿದ್ದಂಥ ತೇಗದಮರವೆಲ್ಲ ಈಗ ಎಲ್ಲಿ ಹೋಯಿತು? ಅದು ಯಾವರೀತಿ ವಿಲೇ ಆಯಿತು? ಆ ಜೈಲಿನ ಆಡಳಿತವನ್ನು ನೋಡಿಕೊಳ್ಳುವ ಅನೇಕ ಅಧಿಕಾರಿಗಳ ಮನೆಗೆ ಬೇಕಾದಂಥ ಸಾಮಾನುಗಳನ್ನು ಮಾಡಿಸಿ ಸಾಗಿಸಲಾಗಿದೆ. ಈ ಬಗ್ಗೆ ವಿವರಗಳನ್ನು ಒದಗಿಸಬೇಕೆಂದು ಕೇಳುತ್ತೇನೆ. ಈ ದಿವಸ ನಾವು ಮದ್ರಾಸ್ ಸರ್ಕಾರದ ಬಡ್ಜೆಟ್ಟನ್ನ ತೆಗೆದು ನೋಡಿದರೆ ಅದರಲ್ಲಿ ಈ ಜೈಲಿನಲ್ಲಿ ಮ್ಯಾನುಫ್ಯಾಕ್ಚರಿಂಗ್ ಆದಂಥ ಸಾಮಾನುಗಳಿಂದ ಎಷ್ಟು ಲಾಭ ಬಂದಿದೆ ಇಲ್ಲಿ ನಮ್ಮ ಜೈಲುಗಳ ಕೈಗಾರಿಕೆಗಳಿಂದ ಎಷ್ಟು ಲಾಭ ಬಂದಿದೆ ಎಂಬುದನ್ನು ನೋಡಿದರೆ ಆ ಮದ್ರಾಸ್ ಜೈಲಿನಲ್ಲಿರತಕ್ಕ ಖೈದಿಗಳೇ ಬೇರೆ ಇಲ್ಲಿ ನಮ್ಮ ಜೈಲಿನಲ್ಲಿರತಕ್ಕ ಖೈದಿಗಳೇ ಬೇರೆಯೇನೋ ಎನ್ನುವಂಥ ಒಂದು ವ್ಯತ್ಯಾಸ ಕಾಣುತ್ತಿದೆ. ಹೀಗೆ ಸರ್ಕಾರದವರ ಕಣ್ಣೆದುರಿಗಿರತಕ್ಕ ಜೈಲು ಒಂದರಲ್ಲೇ ಇಷ್ಟೊಂದು ಲೋಪ ದೋಷಗಳಿರುವಾಗ, ಅವುಗಳನ್ನು ಇಲ್ಲಿಯವರೆಗೂ ಸರಿಪಡಿಸಲು ಸರ್ಕಾರಕ್ಕೆ ಸಾಧ್ಯವಿಲ್ಲವೆಂಬುದಾಗಿ ಕಂಡು ಬರುತ್ತಿರುವಾಗ ಇನ್ನು 300-400 ಮೈಲಿಗಳ ದೂರದಲ್ಲಿರತಕ್ಕ ಜೈಲುಗಳ ಆಡಳಿತ ಯಾವ ಸ್ಥಿತಿಯಲ್ಲಿರಬಹುದೆಂಬುದನ್ನು ಊಹಿಸುವುದಕ್ಕೂ ಸಹ ಸಾಧ್ಯವಾಗಿರುವುದಿಲ್ಲ. ಬೆಳಗಾಂ ಜೈಲಿನಲ್ಲಿ ಅನೇಕ ಪರಿಣತರು ಇದ್ದಾರಂತೆ. ಇತ್ತೀಚೆಗೆ ಇನ್ಸ್‌ಪೆಕ್ಟರ್ ಆಫ್ ಪ್ರಿಸನ್ಸ್‌ಗಳಿಗೆ ಸಂಬಳ ಜಾಸ್ತಿ ಕೊಡುತ್ತಿದ್ದಾರೆ. ಇನ್ಸ್‌ಪೆಕ್ಟರ್

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಜನರಲ್ ಆಫ್ ಪ್ರಿಸನ್ಸ್‌ರವರ ಸ್ಥಾನ ಬಹಳದಿವಸಗಳಿಂದ ಖಾಲಿಬಿದ್ದಿದೆ.

Sri C. M. POONACHA.—This is an in charge arrangement and the Head-quarters man is holding charge. That is all.

Sri C. K. RAJAIAH SETTY.—The person who is now in charge cannot hold the charge for ever.

ಆಡಳಿತದಲ್ಲಿ ಅವ್ಯವಸ್ಥೆಯಾಗಿರುವುದೇ ಇದಕ್ಕೆಲ್ಲ ಮುಖ್ಯ ಕಾರಣವಾಗಿರುತ್ತದೆ. ಆ ಸ್ಥಾನದಲ್ಲಿ ಒಬ್ಬರನ್ನ ಭರ್ತಿಮಾಡಲು ಸರ್ಕಾರ ಏಕೆ ಇಷ್ಟು ನಿಧಾನ ಮಾಡುತ್ತಿದೆ? ಇಲ್ಲಿಗೆ ಸುಮಾರು 11 ತಿಂಗಳ ಮೇಲಾಯಿತೇ? ಇಂಥ ಸ್ಥಾನದಲ್ಲಿ ಟೆಂಪೊರರಿ ಜನರನ್ನು ಇಟ್ಟರೆ ಇದರ ಆಡಳಿತ ಯಾವರೀತಿ ನಡೆದೀತು? ಬೇರೆ ದೇಶಗಳಲ್ಲಿ ಈ ಜೈಲುಗಳ ಆಡಳಿತ ಹೇಗಿದೆ? ರಷ್ಯಾದೇಶ ತೆಗೆದುಕೊಳ್ಳಿ. ಎಲ್ಲ ದೇಶಗಳಲ್ಲಿ ತಪ್ಪಿತಸ್ಥರಿಗೆ ಏನು ಒಂದು ಶಿಕ್ಷೆ ವಿಧಿಸಲಾಗುತ್ತದೋ ಅದಕ್ಕಿಂತಲೂ ಕಠಿಣವಾದ ಶಿಕ್ಷೆಯನ್ನು ಒಂದು ಸಣ್ಣ ತಪ್ಪಿಗೂ ಸಹ ಈ ದಿವಸ ಆ ರಷ್ಯಾದೇಶದಲ್ಲಿ ವಿಧಿಸಲಾಗುತ್ತಿದೆಯಂತೆ. ನಮ್ಮ ದೇಶದಿಂದ ರಷ್ಯಾದೇಶಕ್ಕೆ ಹೋಗಿದ್ದಂಥ ಡೆಲಿಗೇಷನ್ನಿನವರು ರಷ್ಯಾದೇಶದಲ್ಲಿ ಈ ಜೈಲುಗಳ ಸುಧಾರಣೆ ಎಷ್ಟರಮಟ್ಟಿಗೆ ನಡೆದಿದೆಯೆಂಬುದರ ಬಗ್ಗೆ ಏನು ಹೇಳಿದ್ದಾರೆಂಬುದನ್ನು ಈಗ ಓದಲಿಚ್ಛಿಸುತ್ತೇನೆ. ಈ ವಿಚಾರ ಆ ಡೆಲಿಗೇಷನ್ನಿನ ವರದಿಯಿಂದ ತಂದಿದ್ದು. ಈ ವಿಚಾರಹಾಗಿರಲಿ. ಈ ದಿವಸ ನಮ್ಮ ಬೆಂಗಳೂರು ಜೈಲಿನಲ್ಲಿರುವ ರೇಡಿಯೋ ಕೆಟ್ಟು ಹೋಗಿ ಎಷ್ಟು ದಿವಸಗಳಾದವು? ಒಂದು ವರ್ಷದ ಮೇಲಾಗಿದ್ದರೂ ಆ ಅಧಿಕಾರಿಗಳು ಆ ಬಗ್ಗೆ ಇನ್ನೂ ರಿಪೋರ್ಟೇ ಮಾಡಿಲ್ಲ. ಇದರ ಅರ್ಥವೇನೆಂದರೆ ಇಷ್ಟು ಅಧಿಕಾರಿಗಳು, ಸರ್ಕಾರ ಇಷ್ಟೆಲ್ಲ ಇಲ್ಲಿಯೆ ಇದ್ದರೂ ಯಾರೊಬ್ಬರೂಸಹ ಬೆಂಗಳೂರಲ್ಲಿರುವ ಸೆಂಟ್ರಲ್ ಜೈಲಿಗೆ ಹೋಗಿ ಅಲ್ಲಿಯ ವಿಚಾರಗಳನ್ನು ಪರಿಶೀಲನೆ ಮಾಡಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದು. ಇದರ ಜೊತೆಗೆ ಕಲ್ಚರಲ್ ಆಕ್ಟಿವಿಟೀಸ್‌ಗೆ ಎಂದು ಹಣವನ್ನು ಬೇರೆ ಖರ್ಚು ಮಾಡುತ್ತಿದ್ದಾರೆ. ಒಂದು ಲೆಕ್ಚರಿಗೆ 15 ರೂಪಾಯಿಗಳಂತೆಯೋ ಏನೋ ಕೊಡುತ್ತಿದ್ದರು. ಈಗ ಅದೂಸಹ ನಿಂತುಹೋಗಿರುವಂತೆ ಕಾಣುತ್ತಿದೆ. ಇನ್ನು ಕೆಲವು ಪುಸ್ತಕಗಳನ್ನು ಬೇರೆ ಸ್ಕೂಲಿಗೋಸ್ಕರ ಕೊಳ್ಳಬೇಕು. ಅದಕ್ಕೆ 25 ರೂಪಾಯಿಗಳನ್ನು ಕೊಟ್ಟು ಕೊಂಡು ಕೊಳ್ಳಬೇಕಾಗಿದೆ. ಯಾರ ಕೈಯಲ್ಲಿ ಈ ಪುಸ್ತಕ ಕೊಳ್ಳಲು ಹಣವಿದೆ? ವರ್ಷೇ ವರ್ಷೇ ಶಾಲೆಗಳಲ್ಲಿ ಉತ್ತೀರ್ಣರಾಗತಕ್ಕ ಮಕ್ಕಳಿಗೆ ಪುಸ್ತಕ ಕೊಂಡು ಕೊಡಿಸುವುದೇ ದುಸ್ತರವಾಗಿರುವಾಗ ಇನ್ನು ಈ ಪುಸ್ತಕಗಳನ್ನು ಕೊಳ್ಳಲು ಯಾರಿಗೆ ಸಾಧ್ಯವಿದೆ? ಇಂಥ ಪದ್ಧತಿಯಿಂದ ಏನು ಪ್ರಯೋಜನವಾಗುತ್ತದೆಯೆಂದು ಕೇಳುತ್ತೇನೆ? ಈ ವಿಚಾರಗಳನ್ನೆಲ್ಲ ಸರ್ಕಾರ ಕಣ್ಣುಬಿಟ್ಟು ನೋಡಬೇಕು. ನಿನ್ನೆಯ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಕಟುವಾಗಿ ಸದಸ್ಯರು ಟೀಕೆಗಳನ್ನು ಮಾಡುತ್ತಿದ್ದಾರೆಂದು ಹೇಳಿದರು. ಈ ರೀತಿ ಆಡಳಿತವೆಲ್ಲ ಕೆಟ್ಟುಹೋಗುತ್ತಿದ್ದರೆ ಕಣ್ಣಿಂದ ನೋಡಿಕೊಂಡು ಸುಮ್ಮನಿರುವುದು ಹೇಗೆ? ಆಯಿತು, ಇನ್ನು ನಾವು ಕಟುವಾಗಿ ಟೀಕೆ ಮಾಡುವುದನ್ನು ಲಘುವಾಗಿಯೇ ಮಾಡೋಣ. ಬೆಂಗಳೂರಿನಲ್ಲಿ ಇಂಥ ಒಂದು ಸರ್ಕಾರದ ಕೇಂದ್ರದಲ್ಲಿರತಕ್ಕ ಜೈಲಿನ ಆಡಳಿತ ಇಷ್ಟು ದುಸ್ಥಿತಿಯಲ್ಲಿರಬಾರದು. ಬಳ್ಳಾರಿ ಜೈಲಿನಲ್ಲೊಬ್ಬರು ಉಣ್ಣೆ ಕೈಗಾರಿಕೆ ಕಲಿಸತಕ್ಕ ಡೆಮಾನ್‌ಸ್ಟ್ರೇಟರಿದ್ದಾರೆ. ಇವರಿಗೆ ವಿನಾ ಕಾರಣ 3 ವರ್ಷಗಳಿಂದಲೂ ಸಂಬಳ ಸಾರಿಗೆಗಳನ್ನು ಕೊಡುತ್ತಿದ್ದಾರೆ. ಆ ಡೆಮಾನ್‌ಸ್ಟ್ರೇಟರಿಗೆ ಅಲ್ಲಿ ಏನೂ ಕೆಲಸವೇ ಇಲ್ಲ. ಬಡ್ಜೆಟ್‌ನಲ್ಲಿ ದುಡ್ಡನ್ನು ಮಾತ್ರ ಒದಗಿಸುತ್ತಿದ್ದಾರೆ. ಆ ದುಡ್ಡು ನೀರಿನಂತೆ ಖರ್ಚಾಗುತ್ತಿದೆ. ಇನ್ನು ಅಲ್ಲಿರುವ ಖೈದಿಗಳಿಗೆ ಈ ಹಣದಿಂದ ಯಾವ ಪ್ರಯೋಜನವೂ ದೊರೆಕಿದಂತೆ ಕಾಣುವುದಿಲ್ಲ. ಹೀಗೆ ವಿನಾ ಕಾರಣ ಬಹಳ ಹಣ ಖರ್ಚಾಗಿ ಹೋಗುತ್ತಿದೆ. ಹೀಗೆಲ್ಲಾ ನಿಜಾಂಶಗಳಿರುವಾಗ ಅಪರಾಧಿಗಳ ಮಾನಸಿಕ ಪರಿಸ್ಥಿತಿಯನ್ನು ಇವರು ಬದಲಾಯಿಸುತ್ತಿದ್ದಾರೆಂದರೆ ಅದು ನಿಜಾಂಶಕ್ಕೆ ದೂರದ ಮಾತು. ಇದರ ಒಳವ್ಯವಹಾರವೇ ಬೇರೆಯಾಗಿದೆ. ಸರ್ಕಾರದವರಿಗೆ ಅವರ ಪಕ್ಕದಲ್ಲಿರತಕ್ಕ ಜೈಲಿನಲ್ಲಿ ನಡೆಯುತ್ತಿರುವ ವಿಚಾರಗಳೇ ಗೊತ್ತಿಲ್ಲ. ಸ್ಟೋರಿನ ವಿಚಾರ ತೆಗೆದು ಕೊಂಡರೆ ಅಲ್ಲಿಯ ಲೆಕ್ಕ ಪತ್ರಗಳು ಹತ್ತಾರು ವರ್ಷಗಳಿಂದ ಆಡಿಟ್ಟೇ ಆಗಿರುವುದಿಲ್ಲ. ಆಡಿಟ್ ಆದ ವರದಿ ಹೊರಬಿದ್ದಮೇಲೆ ಕನಿಷ್ಠಪಕ್ಷ ಇದರಲ್ಲಿ ಶೇಕಡ 25 ರಷ್ಟು ಹಣ ಸೋರಿಹೋಗಿರುವುದಾಗಿ ತಿಳಿಯಬಹುದು. ಈ ದಿವಸ ಈ ಸ್ಟೋರಿನಲ್ಲಿ ಸರಿಯಾದ ಅಕೌಂಟುಗಳನ್ನೇ ಇಟ್ಟಿಲ್ಲ. ಎಂದೋ ಒಂದು ದಿವಸ ಈ ಸಭೆಯ ಮುಂದೆ ಹತ್ತು ವರ್ಷಗಳ ಕೆಳಗಿನ ಒಂದು ಆಡಿಟ್ ವರದಿಯನ್ನು ಇಟ್ಟು ಬಿಡುತ್ತೀರಿ. ಈ ಡಿಫಿಷಿಯೆನ್ಸಿಯ ಬಗ್ಗೆ ಯಾರು ಯಾರಿಂದ ಎಷ್ಟೆಷ್ಟು ಹಣ ಬರಬೇಕಾಗಿದೆ, ಎಷ್ಟು ಹಣ ವಸೂಲಾಗಿದೆ ಬಾಕಿ ಎಷ್ಟು ನಿಂತಿದೆ, ಹತ್ತು ವರ್ಷಗಳಿಂದಲೂ ಇದರ ಆಡಳಿತವನ್ನ ಯಾರು ಯಾರು ನೋಡಿಕೊಳ್ಳುತ್ತಿದ್ದರು, ಆ ಅಧಿಕಾರಿಗಳೆಲ್ಲ ಈಗ ಎಲ್ಲೆಲ್ಲಿದ್ದಾರೆ ಎಂಬುದನ್ನು ನಾವು ಹೇಗೆ ತಿಳಿದುಕೊಳ್ಳುವುದು? ಈ ದಿವಸ ಅಲ್ಲಿರತಕ್ಕ ಇದರ ಮೇಲುಸ್ತುವಾರಿ ಜನಗಳೆಲ್ಲ ದೊಡ್ಡ ಹೆಗ್ಗಣಗಳಾಗಿದ್ದಾರೆ. ಈ ಬಗ್ಗೆ ಎಲ್ಲರ ಕೈವಾಡವೂ ಇರುತ್ತದೆ. ನಾವೇನಾದರು ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಸನ್ಸ್ ಅವರಿಗೆ ಈ ವಿಚಾರದಲ್ಲಿ ಒಂದು ದೂರನ್ನು ತಿಳಿಸಿದರೆ ಆ ಕೂಡಲೆ ಅಲ್ಲಿಂದ ಒಂದು ಸ್ವಿಚ್ ಅವರ ಕೆಳಗಿನ ಆಫೀಸಿಗೆ ಬೀಳುತ್ತದೆ. ಅನಂತರ ಆ ಆಫೀಸಿನವರು ಮತ್ತೊಂದು ಕಡೆಗೆ ಸ್ವಿಚ್ ಮಾಡುತ್ತಾರೆ. ಸರ್ಕಾರಕ್ಕೆ ದೂರಿತ್ತರೂ ಇಷ್ಟೇನೆ. ಆದರೆ ನನಗೆ ಯಾರು ಯಾರು ಹೀಗೆಲ್ಲ ಮಾಡುತ್ತಿದ್ದಾರೆಂಬ ವಿಚಾರ ಸಂಪೂರ್ಣವಾಗಿ ಗೊತ್ತಿದೆ. ಆದರೆ ಅವರ ಹೆಸರುಗಳನ್ನು ಈಗ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆದರೆ ಅವರನ್ನೆಲ್ಲ ಅಲ್ಲಿಂದ ತಕ್ಷಣ ಟ್ರಾನ್ಸ್‌ಫರ್ ಮಾಡಬೇಕು. ಇನ್ನು ಈ ಜೈಲುಗಳಿಗೆ ತರಕಾರಿ ಒದಗಿಸಲು ಕೆಲವು ಕಂಟ್ರಾಕ್ಟರುಗಳನ್ನು ಮಾಡಿಕೊಂಡಿರುತ್ತಾರೆ. ಹೇಗಯ್ಯ, ನಿಮಗೆ ಆ ಬಾಬಿನಲ್ಲಿ ಅಷ್ಟುಲಾಭವಿದೆ ಎಂದು ಒಬ್ಬ ಕಂಟ್ರಾಕ್ಟರನ್ನು ಕೇಳಿದ್ದಕ್ಕೆ ಆತ ಒಂದು ಕುಂಬಳಕಾಯಿಗೆ 25-30 ರೂಪಾಯಿಗಳಿಗೆ ಚಾರ್ಜು ಮಾಡುವಂಥ ಅವಕಾಶವಿದೆಯೆಂದು ಹೇಳಿದ. ಅವು ನಿಮ್ಮ ಟೆಂಡರು ಪಟ್ಟಿಯಲ್ಲೂ ಇರುತ್ತವೆ. ಬಟಾಣಿ, ಖಾಲಿ ಫ್ಲವರ್—ಎಲ್ಲವೂ ಇರುತ್ತವೆ. ಆದರೆ, ಒಂದಾಣೆಗೆ ಒಂದು ಪೌಂಡು ಸಿಕ್ಕುವುದನ್ನು ಪೌಂಡಿಗೆ 10 ಆಣೆಯಂತೆ ಹಾಕಿದರೆ ಏನು ಪ್ರಯೋಜನ? ಕಂಟ್ರಾಕ್ಟರುಗಳ ಬಾಯಿಂದ ಬಂದ ಮಾತು ಇದು. ಸುಮ್ಮನೆ ಹೇಳುತ್ತಿಲ್ಲ. ಈ ರೀತಿ ಸರ್ಕಾರದ ಹಣ ಪೋಲಾದರೆ ವ್ಯಸನವಾಗುವುದಿಲ್ಲವೇ? ವ್ಯವಹಾರ ಹೀಗೆ ನಡೆಯುತ್ತಿದ್ದರೆ ಸರಕಾರದ ರಕ್ಷಣೆ

ಎಷ್ಟರಮಟ್ಟಿಗಿದೆಯೆಂಬುದನ್ನು ಮಾನ್ಯಮುಖ್ಯಮಂತ್ರಿಗಳೇ ತಿಳಿದುಕೊಳ್ಳಲಿ. ಈ ದಕ್ಷತೆಯನ್ನು ಯಾವ ರೀತಿ ವರ್ಣನೆಮಾಡಬೇಕೆಂಬುದೇ ನನಗರ್ಥವಾಗುವುದಿಲ್ಲ.

ಆಮೇಲೆ, ಕೂಲಿ. ಗಂಡಾಳಿಗೆ ನಾಲ್ಕು ಅಣೆ ಕೂಲಿಯೆಂದು ವಿಧಿಸಿದ್ದೀರಿ. ಹತ್ತು ವರ್ಷಗಳ ಹಿಂದೆ ಇದನ್ನು ನಿಗದಿಮಾಡಿದ್ದು. ಹಿಂದೆ ಎಂಟು ಅಣೆ ತೆಗೆದುಕೊಳ್ಳುತ್ತಿದ್ದವನು ಈಗ ಒಂದು ರೂಪಾಯಿ ತೆಗೆದುಕೊಳ್ಳುತ್ತಾನೆ. ಹೀಗಿರುವಲ್ಲಿ ಅದೇ ಕೂಲಿಯನ್ನು ಇಂದೂ ಕೊಡುತ್ತಿದ್ದರೆ ಏನು ಹೇಳೋಣ? ವಿಧಾನ ಸೌಧದಲ್ಲಿ ನೂರಾರು ಜನ ಖೈದಿಗಳು engage ಆಗಿದ್ದಾರೆ. ಅವರು ಕಿಂಚಿತ್ತಾದರೂ ಕೆಲಸಮಾಡುತ್ತಿದ್ದಾರೆ, ಸ್ವಲ್ಪ ಸುಧಾರಣೆಯಾಯಿತು ಎಂದು ತಿಳಿದಿದ್ದೆವು. ಆದರೆ ವಾಸ್ತವವಾಗಿ ನೋಡಿದರೆ 1940ನೆಯ ಇಸವಿಯಲ್ಲಿ ಚಂದ್ರಶೇಖರಯ್ಯರ್ ಕಮಿಟಿಯವರು ಏನು ಸುಧಾರಣೆಗಳನ್ನು ಹೇಳಿದ್ದರೋ ಅದರಲ್ಲಿ ಶೇಕಡ 25 ಭಾಗದಷ್ಟೂ ಕೂಡ ಸುಧಾರಣೆಯಾಗಿಲ್ಲ. ಕಾರಣ ಇಲ್ಲಿ ದಕ್ಷತೆ ಏನೇನೂ ಇಲ್ಲ. ತೇಗದಮರದ ವಿಚಾರವನ್ನೇ ನೋಡಿ. ಅದು ಹೇಗೆ ಹೋಯಿತು ನೋಡಿ. First class ಆದ standard wood ಅದು. ಅವರು ಊಟಮಾಡುವ ತಟ್ಟೆಗಳನ್ನು ನೋಡಿ. ತೆಗೆದುಕೊಂಡು 10 ವರ್ಷವಾಯಿತು. ಅವುಗಳನ್ನು ಯಾವಾಗ ಹರಾಜು ಹಾಕಿದರು? ಅವು ಹೇಗೆ ಮಾಯವಾದುವೋ ಗೊತ್ತಿಲ್ಲ. ಈಗ ಎರಡು ವರ್ಷಗಳ ಕೆಳಗೆ ಕುಂಬಳಗಿಡದ ಎಲೆಯಲ್ಲಿ ಊಟಮಾಡುತ್ತಿರುವುದನ್ನು ನೋಡಿ ಬಹಳ ವ್ಯಸನವಾಯಿತು. ಈಚೆಗೇನೋ ತಟ್ಟೆ ಮುಂತಾದುವುಗಳನ್ನು ತರಿಸಿ ಸ್ವಲ್ಪ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದಾರೆಂದು ಗೊತ್ತಾಯಿತು. ಕಿಂಚಿತ್ತಾದರೂ ಮಾಡಿದರಲ್ಲಾ ಎಂದು ಸಂತೋಷವಾಯಿತು. ಆದರೂ ಒಟ್ಟಿನಲ್ಲಿ ಸರಿಯಾದ ಆಡಳಿತ ಇಲ್ಲವೆಂದು ಹೇಳುತ್ತೇನೆ.

ಇಲ್ಲಿ ಅಂಕಿಗಳನ್ನು ಕೊಟ್ಟಿದ್ದೀರಿ. ಏನಿದು! 3.77 ಲಕ್ಷ ರೂಪಾಯಿಗಳ ಆದಾಯ, 4.66 ಲಕ್ಷ ರೂಪಾಯಿಗಳ ಖರ್ಚಾಗಿದೆಯೆಂದು ಹೇಳಿದ್ದೀರಿ, Jail manufacturesನಿಂದ, ನೀವು ಕೊಡುವ ಕೂಲಿಯ ಖರ್ಚು ಇಷ್ಟು ಕಡಮೆಯಾಗಿರುವಾಗ, ನಷ್ಟ ಹೇಗೆ ಆಗುತ್ತದೆ? ನಾಲ್ಕಾಣೆ ಕೂಲಿ ಹಾಕಿದರೂ ಶೇಕಡ 30 ರಷ್ಟು ನಷ್ಟವಾಯಿತೆಂದರೆ ಅಲ್ಲಿರುವ ಹೆಗ್ಗಣಗಳೆಲ್ಲವನ್ನೂ ಮೊದಲು ಹಿಡಿದು ಹೊಡೆದು ಹಾಕಬೇಕು. ಇಲ್ಲದಿದ್ದರೆ, ಈ ವರ್ಷ ಶೇಕಡ 30 ನಷ್ಟವಾದರೆ ಮುಂದಿನ ವರ್ಷ 60 ನಷ್ಟವಾಗುವುದು ಸ್ವತಸ್ಸಿದ್ಧ. ನಮ್ಮ ಇಂಡಿಯನ್ ಪಾರ್ಲಿಮೆಂಟರಿ ಡೆಲಿಗೇಷನ್ ರಷ್ಯಾಕ್ಕೆ ಹೋಗಿದ್ದಾಗ ಅಲ್ಲಿನ ಖೈದಿಗಳನ್ನು ಭೇಟಿಮಾಡಿದಾಗ ನಡೆದ ಸಂಭಾಷಣೆ ಬಹಳ ಸ್ವಾರಸ್ಯವಾಗಿದೆ. ಅಲ್ಲಿನ ಸರ್ಕಾರ ಖೈದಿಗಳನ್ನು ಹೇಗೆ ನೋಡಿಕೊಳ್ಳುತ್ತಿದ್ದಾರೆಂಬುದು ಗೊತ್ತಾಗುತ್ತದೆ. ತಮ್ಮ ಅಪ್ಪಣೆ ಪಡೆದು ಅದನ್ನು ಸ್ವಲ್ಪ ಓದುತ್ತೇನೆ. ಅದು ಈ ರೀತಿ ಇದೆ:—"ನಾವು ಒಳಗೆ ಹೋದೆವು. ಅಲ್ಲಿದ್ದ ಮೂವರು ಬಂದಿಗಳು ಎದ್ದು ನಿಂತರು. ಕೋಣೆಯ ಉಭಯ ಪಾರ್ಶ್ವಗಳಲ್ಲೂ ಕಬ್ಬಿಣದ ಮಂಚಗಳಿದ್ದುವು. ಅವು ನೆಲಕ್ಕೆ ಸ್ಕ್ರೂಗಳ ಮೂಲಕ ಬಂಧಿಸಲ್ಪಟ್ಟಿದ್ದವು. ಒಂದೊಂದು ಮಂಚದ ಮೇಲೂ ಒಂದೊಂದು ಹಾಸಿಗೆ, ಹೊದಿಕೆಯುಳ್ಳ ದಿಂಬು, ಎರಡು ದುಪ್ಪಟಿಗಳು ಮತ್ತು ಒಂದು ಕಂಬಳಿ ಇದ್ದುವು. ಆ ಕೋಣೆಯಲ್ಲಿ 21 ಹಾಸಿಗೆಗಳಿದ್ದುವು. ಪ್ರತಿಯೊಂದು ಹಾಸಿಗೆಯ ಪಕ್ಕದಲ್ಲೂ ಒಂದು ಚಿಕ್ಕ ಮೇಜು ಇದ್ದಿತು.

"ಉಳಿದ ಖೈದಿಗಳೆಲ್ಲಿ"?—ಖಾಲಿ ಹಾಸಿಗೆಗಳನ್ನು ಕಂಡು ಶ್ರೀ ಡಗೆಯವರು ಮೇಲ್ವಿಚಾರಕನನ್ನು ಕೇಳಿದರು.

"ಅವರು ಕ್ಲಬ್ಬಿಗೆ ಹೋಗಿದ್ದಾರೆ, ಅಲ್ಲಿ ಇಂದು ಅವರಿಗೆ ಒಂದು ಹೊಸ ಚಲಚ್ಚಿತ್ರ ತೋರಿಸಲ್ಪಡುತ್ತಿದೆ."

ಅತಿಥಿಗಳು ಬೆರಗಾಗಿ ಒಬ್ಬರ ಮುಖ ಒಬ್ಬರು ನೋಡಿದರು.

"ನಿಮ್ಮ ಹೆಸರೇನು?" ಖೈದಿಗಳಲ್ಲೊಬ್ಬರನ್ನು ಶ್ರೀ ಡಗೆಯವರು ಕೇಳಿದರು.

"ಸ್ಮಿರ್ನೋವ್"

"ನೀವೇಕೆ ಸಿನಿಮಾಕ್ಕೆ ಹೋಗಲಿಲ್ಲ?"

"ಮೈಗೆ ಚೆನ್ನಾಗಿಲ್ಲ"

"ಏನದು, ನೀವು ಓದುತ್ತಾ ಇರೋದು?"

ಸ್ಮಿರ್ನೋವ್ ಕೈಯಲ್ಲಿದ್ದ ಪುಸ್ತಕವನ್ನು ಮುಂದಕ್ಕೆ ಚಾಚಿದರು. ಎಲೆಕ್ಟ್ರೋ-ಮೆಕ್ಯಾನಿಕ್ಸ್ ಮೇಲಿನ ಒಂದು ಪಠ್ಯಪುಸ್ತಕ.

"ಕಾಲೇಜಿಗೆ ಸೇರಬೇಕೆಂದು ನಿಮ್ಮ ಅಭಿಲಾಷೆಯೇ? ಪ್ರವೇಶಿಕ ಪರೀಕ್ಷೆ ಪಾಸುಮಾಡಲು ಸಿದ್ಧತೆ ನಡೆಸುತ್ತಿರುವಿರೇನೋ"

"ಹೌದು ನನ್ನ ಶಿಕ್ಷಾವಧಿ ತೀರಿದವೇಳೆ ಎಲೆಕ್ಟ್ರೋಟೆಕ್ನಿಕಲ್ ಶಾಲೆಗೆ ಹೋಗಲು ಇಚ್ಛಿಸಿದ್ದೇನೆ".

ಉಪಾಧ್ಯಕ್ಷರು.—ಎಲ್ಲಿಂದ ಬಂದ ರಿಪೋರ್ಟು, ಅದು?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—Report of the Indian Delegation which visited Russia.

ಅಲ್ಲಿನ comforts ಖೈದಿಗಳಿಗೇನಿದೆ ಎಂಬುದನ್ನು ಒಬ್ಬ ಖೈದಿಯೇ ಹೇಳಿದ್ದಾಳೆ. "ನನಗೆ ಇಲ್ಲಿ ಏನೂ ಕೊರತೆಯಿಲ್ಲ. ತಿನ್ನಲು ಸಾಕಷ್ಟಿದೆ, ಕೆಲಸವಿದೆ. ಕೆಲಸಕ್ಕೆ ತಕ್ಕಷ್ಟು ಹಣ ನನ್ನ ಲೆಕ್ಕದಲ್ಲಿದೆ. ಅದನ್ನು ನನ್ನ ಸಂಸಾರಕ್ಕೂ ವರ್ಗಾಯಿಸಬಹುದು. ನನಗೆ ಬೇಕಾದಂಥ ಊಟ-ತಿಂಡಿ ಮತ್ತಿತರ ಸಾಮಾನುಗಳನ್ನು ಸೆರೆಮನೆಯ ಅಂಗಡಿಗಳಲ್ಲಿ ವಿಶೇಷ ಕೂಪನ್ಗಳ ಮೇಲೆ ಕೊಳ್ಳಬಹುದು. ಪುಸ್ತಕ, ಪತ್ರಿಕೆಗಳನ್ನು ಓದುತ್ತೇನೆ. ಚಲಚ್ಚಿತ್ರ, ಟಿ. ವಿ. ಪ್ರಸಾರಗಳನ್ನು ನೋಡುತ್ತೇನೆ. ಇಷ್ಟೆಲ್ಲ ಇದ್ದರೂ, ಅಯ್ಯೋ, ಸ್ವಾತಂತ್ರ್ಯಕ್ಕಾಗಿ ನನ್ನ ಮನಸ್ಸು ಎಷ್ಟು ಹಂಬಲಿಸುತ್ತದೆ" ಎಂದಳು, ಠಿನ್ನೆರದ ಕ್ಯಾಚೊಕ್ಕಾವಾ ಕಂಬನಿ ತುಂಬಿ.

ಇದನ್ನು ನೋಡಿದರೆ ನಮಗೆ ಗೊತ್ತಾಗುತ್ತದೆ, ಅಲ್ಲಿನ ಬಂದಿಖಾನೆಗಳಲ್ಲಿ ಯಾವ ತೆರದ ಅನಾನುಕೂಲವೂ ಇಲ್ಲವೆಂಬುದು. ಮತ್ತೆ ನೋಡಿದರೆ, ರಷ್ಯಾದೇಶದಲ್ಲಿ ಮಿಕ್ಕೆಲ್ಲ ದೇಶಗಳಿಂದಲೂ ಅತಿ ಕಠಿಣ ಶಿಕ್ಷೆಗಳು ವಿಧಿಸಲ್ಪಡುತ್ತವೆಯೆಂದು ನಮಗೆ ಗೊತ್ತು. ಕಮ್ಯೂನಿಸ್ಟ್ ಸರ್ಕಾರ ಇಷ್ಟರಮಟ್ಟಿಗೆ ಮಾಡಿರುವಾಗ ನಾವೇನು ಮಾಡಿದ್ದೇವೆ? ನಾವು ಕೊಡುತ್ತಿರುವ ಲಕ್ಷಾಂತರ ರೂಪಾಯಿಗಳೂ ಕೂಡ ಪೋಲಾಗುತ್ತಿವೆ. ಕೊಟ್ಟ ದುಡ್ಡು ಸಾರ್ಥಕವಾಗುತ್ತಿಲ್ಲ. ಸುಮ್ಮನೆ ಹಾಗಿದೆ, ಹೀಗಿದೆ, ಏನೋ ಸುಧಾರಣೆ ಮಾಡುತ್ತೇವೆ ಎನ್ನುತ್ತೀರಿ. ರಾಜಕೀಯ ಖೈದಿಗಳಿಗೆ ಈಚೆಗೆ A ಕ್ಲಾಸ್‌ಖೈದಿಗಳಿಗಿಂತ ಜಾಸ್ತಿ ಕೊಡುತ್ತೇವೆಂದು ಹೇಳಿದಿರಿ. ಯಾವುದೋ political object ಮೇಲೆ ಅವರನ್ನು arrest ಮಾಡಿರುವಾಗ, 107ನೆಯ ಸೆಕ್ಷನ್ನನ್ನೇಕೆ ಪ್ರಯೋಗಮಾಡಿದಿರಿ? ಕಾಂಗ್ರೆಸ್ಸಿನವರ ಹೊಡೆದಾಟಮಾಡಿದಾಗ ಕೂಡ 107ನೆಯ ಸೆಕ್ಷನ್ನನ್ನು ಹಾಕಲಿಲ್ಲ ಎಂದ ಮೇಲೆ, ಈಗ 107ನೆಯ ಸೆಕ್ಷನ್ನನ್ನು ಪ್ರಯೋಗಮಾಡಿದೆಯೆಂದರೆ ಏನೋ ಆಳವಾದ

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಉದ್ದೇಶವಿದೆಯೆಂದು ಗೊತ್ತಾಗುತ್ತದಲ್ಲವೇ ? ಅವರು ಚಳವಳಿ ಹೂಡಿರುವುದು ಒಂದು ತತ್ವದ ಸಾಧನೆಗಾಗಿ. ಅಂಥವರಮೇಲೆ 107ನೆಯ ಸೆಕ್ಷನ್ ಹಾಕುವುದು ಯಾವ ನ್ಯಾಯ ? ಬ್ರಿಟಿಷರೂಕೂಡ ಈ ರೀತಿ treat ಮಾಡ ದಿರುವಾಗ, ನೀವು ಪ್ರಜಾಪ್ರಭುತ್ವದಲ್ಲಿ ಇಷ್ಟು ಕಠಿಣ ರೀತಿಯಲ್ಲಿ ವರ್ತಿಸುವುದಾದರೆ, ಬೇರೆ ಇನ್ನಾವ ಪಾರ್ಟಿಗಳೂ ಇರಕೂಡದು, ಅವುಗಳನ್ನು ಮಟ್ಟಹಾಕ ಬೇಕೆಂಬ ಉದ್ದೇಶದಿಂದ ಮಾಡಿರುವಂತೆ ಕಾಣು ತ್ತದೆ.

ಕೋರ್ಟುಗಳ ವಿಚಾರದಲ್ಲಿ ಮಾನ್ಯ ಮಿತ್ರರುಗಳು ಈಗಾಗಲೇ ಮಾತನಾಡಿದ್ದಾರೆ. ಈಚೆಗೆ ಸರ್ಕಾರ ದವರು ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನು ನೇಮಕ ಮಾಡಿರುವುದನ್ನು ನೋಡಿದರೆ, ಏನೋ ದಾಕ್ಷಿಣ್ಯ, ಅಭಿಮಾನದಮೇಲೆ ಮಾಡಿದ್ದಾರೆಂದು ಕಾಣುತ್ತದೆ. ಅವರು ಸರ್ಕಾರಿ ಕೇಸುಗಳನ್ನು ಎಷ್ಟುಮಟ್ಟಿಗೆ conduct ಮಾಡಿದ್ದಾರೆ, ಎಷ್ಟು ಖೂನಿ ಮೊಕದ್ದಮೆ ಗಳನ್ನು ನಡೆಸಿದ್ದಾರೆಂಬುದನ್ನು ನೋಡಿದ್ದಾರೆಯೇ ? ನಿರ್ದಾಕ್ಷಿಣ್ಯವಾಗಿ Barನಲ್ಲಿ ಉತ್ತಮ ಲಾಯರಾಗಿ ರುವವರನ್ನು, ಸರ್ಕಾರಿ ಕೆಲಸಕ್ಕೆ ಬರುವುದಕ್ಕೆ ಲಾಯ ಕ್ಕಾಗಿದ್ದರೆ–ಅಂಥವರನ್ನು ತೆಗೆದುಕೊಳ್ಳಿ. ನಮ್ಮ ಚಿಕ್ಕನಾಯ್ಕನಹಳ್ಳಿ ಮುನಿಸಿಪಾಲಿಟಿಯ ಒಂದು ಕೇಸು ಕೆಳಗಿನ ಕೋರ್ಟಿನಲ್ಲಿ ನಮ್ಮಂತೆ ತೀರ್ಮಾನವಾದುದು ಪಬ್ಲಿಕ್ ಪ್ರಾಸಿಕ್ಯೂಟರು ಸಂಬಂಧಪಟ್ಟ ದಾಖಲೆ ಗಳನ್ನು ಹಾಜರ್‌ಪಡಿಸದಿದ್ದ ಕಾರಣ ಕೊನೆಗೆ ಬಿದ್ದು ಹೋಯಿತು. ನ್ಯಾಯವನ್ನು ಪ್ರತಿನಿಧಿಸುವ, ನ್ಯಾಯ ವನ್ನು ಎತ್ತಿಹಿಡಿಯುವ ಸರ್ಕಾರಿ ಪ್ರಾಸಿಕ್ಯೂಟರ್ ಲಾಯಕ್ಕಾದವನಾಗಿದ್ದರೆ ಕೇಸುಗಳು ನಿಲ್ಲುತ್ತವೆ. ಆದ್ದರಿಂದ ಈ ರೀತಿ ಮುಂದೆ ನೇಮಿಸಿಕೊಳ್ಳ ಬೇಕಾದರೆ..........

ಶ್ರೀ ಬಿ. ವೈಕುಂಠಬಾಳಿಗ.—ಆ ಕೇಸಿನ ನಂಬರ್ ಏನು ?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಚಿಕ್ಕನಾಯ್ಕನಹಳ್ಳಿ ಮುನಿಸಿಪಲ್ ಕೇಸನ್ನು ಪಬ್ಲಿಕ್ ಪ್ರಾಸಿಕ್ಯೂಟರ್ ತೆಗೆದು ಕೊಂಡು ಹಾಳುಮಾಡಿದರು.

ಶ್ರೀ ಬಿ. ವೈಕುಂಠಬಾಳಿಗ.—ಪಬ್ಲಿಕ್ ಪ್ರಾಸಿಕ್ಯೂ ಟರು ಮುನಿಸಿಪಾಲಿಟಿ ಕೇಸ್ ತೆಗೆದು ಕೊಂಡು ಹಾಳು ಮಾಡಿದ ಕೇಸು ಯಾವುದೆಂಬುದನ್ನು ಹೇಳುತ್ತೀರಾ ?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಚಿಕ್ಕನಾಯಕನಹಳ್ಳಿ ಮುನಿಸಿಪಾಲಿಟಿಗೆ ಸಂಬಂಧಪಟ್ಟ ಡಿಸ್ಟ್ರಿಕ್ಟ್‌ಬೋರ್ಡ್ ಮುನಿಸಿಪಾಲಿಟಿಗಳ ಕೇಸುಗಳನ್ನು ನಡೆಸುವುದಕ್ಕೆ ತಾವು ಯಾರನ್ನು ನೇಮಿಸುತ್ತೀರಿ ?

ಶ್ರೀ ಬಿ. ವೈಕುಂಠಬಾಳಿಗ.—Criminal case ಗಳನ್ನು conduct ಮಾಡುವುದಕ್ಕೆ ಸೆಷನ್ಸ್‌ನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಇರುತ್ತಾರೆ. ಸಿವಿಲ್ ಕೇಸ್‌ಗಳಲ್ಲಾದರೆ Government pleader ಇರುತ್ತಾರೆ.

Sri C. K. RAJAIAH SETTY.—The Land Acquisition Officer is the only authority to appeal and when he appeals, he appoints the Government Pleader.

ಹೀಗೆ ಜುಡಿಷಿಯಲ್ ಇಲಾಖೆಗೆ ನೇಮಕಮಾಡುವಾಗ ದಕ್ಷತೆ ಇಲ್ಲದಿದ್ದರೆ ಅಲ್ಲಿ ಕೆಲಸ ಚೆನ್ನಾಗಿ ನಡೆಯುವು ದಿಲ್ಲ. ಇವೊತ್ತಿನ ದಿವಸ ಒಬ್ಬ ಸಾಮಾನ್ಯ ಪ್ರಜೆ ಕೋರ್ಟಿಗೆ ಹೋದರೆ ಅವನ ನ್ಯಾಯವಾದ ಕೇಸೂ ಕೂಡ ದಕ್ಷತೆಯಿಲ್ಲದೆ ಇರುವುದರಿಂದ ಯಶಸ್ವಿಯಾಗದ ಸಂಭವವಿರುತ್ತದೆ. ಆದುದರಿಂದ ಈ ವಿಷಯದಲ್ಲಿ ನನ್ನ ಸಲಹೆ ಏನೆಂದರೆ, ಸರಕಾರ ನ್ಯಾಯವನ್ನು ಎತ್ತಿ ತೋರಿಸಬೇಕಾಗಿದ್ದರೆ ದಕ್ಷತೆಯಿರುವ ವ್ಯಕ್ತಿಗಳನ್ನು ನೇಮಿಸಬೇಕು. ಇದರಿಂದ ಸರಕಾರದ ಗೌರವ ಉಳಿಯುತ್ತದೆ. ಯಾವುದೋ ಒಂದು ದಾಕ್ಷಿಣ್ಯಕ್ಕೊ ಳಗಾಗಿ ಅಥವಾ ಯಾವುದೋ ಒತ್ತಾಯಕ್ಕೊಳಗಾಗಿ ದಕ್ಷತೆಯಿಲ್ಲದವರನ್ನು ಇಂತಹ ಹುದ್ದೆಗಳಿಗೆ ನೇಮಿಸಿ ದರೆ ಬಡಜನಗಳಿಗೆ ಸರಿಯಾದ ನ್ಯಾಯ ದೊರಕುವು ದಿಲ್ಲ. ಇದಲ್ಲದೆ ಇದರಿಂದ ಸರಕಾರದ ಗೌರವವೂ ಹೋಗುತ್ತದೆ.

ಹಿಂದೆ ಮಲ್ಲಪ್ಪ ಕಮಿಟಿಯು ತನ್ನ ವರದಿಯನ್ನು ಸರಕಾರಕ್ಕೆ ಒಪ್ಪಿಸಿತ್ತು. ಅದರಂತೆ ಯಾವ ಯಾವಕಡೆ ಗಳಲ್ಲಿ ಎಷ್ಟೆಷ್ಟು ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟು ಕೋರ್ಟುಗಳಿರಬೇಕು, ಯಾವ ಯಾವ ಕಡೆ ಬರಿಯ ಮುನ್‌ಸೀಫ್ ಕೋರ್ಟಿರಬೇಕು ಯಾವ ಯಾವ ಪ್ರದೇಶ ದಲ್ಲಿ ಮ್ಯಾಜಿಸ್ಟ್ರೇಟು ಕೋರ್ಟಿರಬೇಕು ಎಂಬುದರ ಬಗ್ಗೆ ಸಮಿತಿಯವರು ಹಿಂದೆಯೇ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ಕೆಲವು ಕೋರ್ಟುಗಳಲ್ಲಿ ಕೆಲಸ ಬಹಳ ಜಾಸ್ತಿಯಾಗಿದೆ. ಉದಾಹರಣೆಯಾಗಿ ಈಗ ತಿಪಟೂರಿನಲ್ಲಿರುವ ಕೋರ್ಟಿನಲ್ಲಿ ಒಂದು ವರ್ಷದಿಂದ ಎರಡು ವರ್ಷಗಳವರೆಗಿರುವ ಎಷ್ಟೋ ಕೇಸುಗಳು ಇನ್ನೂ ಫೈಸಲೇ ಆಗಿಲ್ಲ. ಒಂದು ದೊಡ್ಡ ಹೊಡೆದಾ ಟಕ್ಕೆ ಸಂಬಂಧಿಸಿದ ಕೇಸು ಇನ್ನೂ, ಎಂದರೆ ಸುಮಾರು ಒಂದೂವರೆ ವರ್ಷಗಳಿಂದ, ನಡೆಯುತ್ತಿದೆ. ಪ್ರತಿಹೀರಂಗಿನಲ್ಲೂ ಐದಾರು ಸಾಕ್ಷಿಗಳನ್ನು ಕರೆದು ಕೊಂಡು ಬಂದು ಅವರಿಗಾಗಿ 15 ರಿಂದ 20 ರೂಪಾ ಯಿಗಳವರೆಗೆ ಖರ್ಚುಮಾಡಿದಾಗ್ಯೂ ಸರಿಯಾದ ನ್ಯಾಯ ದೊರಕದಿದ್ದರೆ ಬಡವನಾಗಿರುವವನಿಗೆ ಹೇಗೆ ಅನುಕೂಲವಾಗುತ್ತದೆ ? ತಾವೇ ಯೋಚಿಸಿ. ಹೀಗೆ ಎಷ್ಟೋ ಕಡೆಗಳಲ್ಲಿ ಕೇಸುಗಳು ಬಹಳ ಜಾಸ್ತಿಯಾಗಿವೆ ಇದು ತಮಗೂ ಗೊತ್ತಿದೆ. ಎಷ್ಟು ಕೇಸುಗಳನ್ನು ಸಿವಿಲ್ ಕೋರ್ಟುಗಳು ತೀರ್ಮಾನಮಾಡಬೇಕು, ಎಷ್ಟು ಕೇಸುಗಳನ್ನು ಮ್ಯಾಜಿಸ್ಟ್ರೇಟ್ ಕೋರ್ಟುಗಳು ತೀರ್ಮಾನಮಾಡಬೇಕು, ಎನ್ನುವುದನ್ನು ವಿಚಾರಮಾಡಿ ನೋಡಿದರೆ ಕೆಲಸ ಜಾಸ್ತಿಯಾಗಿದೆ ಎನ್ನುವುದು ತಿಳಿ ಯುತ್ತದೆ. ಅದರಂತೆ ಹೆಚ್ಚಿಗೆ ಕೋರ್ಟುಗಳನ್ನು ಕೊಡಬೇಕು. ಹೀಗೆ ಇವೊತ್ತಿನ ದಿನ ತಿಪಟೂರಿನಲ್ಲಿ ಸಾವಿರಾರು ಕೇಸುಗಳು pending ಆಗಿವೆ. ಮಲ್ಲಪ್ಪ ಕಮಿಟಿಯವರು ಹೇಳಿರುವಂತೆ ತಾವೂ ವಿಮರ್ಶೆಮಾಡಿ ಇಂತಹ ಕಡೆಗಳಲ್ಲಿ ಬೇರೆ ಕೋರ್ಟುಗಳನ್ನು ನೇಮಿಸು ವುದರಿಂದ ನ್ಯಾಯ ಸುಲಭವಾಗಿ ದೊರೆಯುತ್ತದೆ ಮತ್ತು ಜನರಿಗೂ ತೃಪ್ತಿಯಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಬೇರೆ ಬೇರೆ ಕೋರ್ಟುಗಳನ್ನು ಕೊಡು ವುದಕ್ಕೆ ಒಪ್ಪದಿದ್ದರೆ ಈಗ ನಮ್ಮ ಮುಂದಿರುವ ನ್ಯಾಯಾಂಗದ ಬೇಡಿಕೆಯನ್ನು ಒಪ್ಪುವುದಕ್ಕಾಗುವು ದಿಲ್ಲ.

ಆದರೆ ಒಂದು ವಿಚಾರಕ್ಕೆ ನಾನು ಸಂತೋಷ ಸೂಚಿಸಬೇಕಾಗಿದೆ. ಅದೇನೆಂದರೆ, ಹೊರಗಡೆಯಿಂದ ನಮ್ಮ ಹೈಕೋರ್ಟಿಗೆ ಚೀಫ್ ಜಡ್ಜಿಗಳನ್ನು ನೇಮಿಸಿರು ವುದರಿಂದ ನಮ್ಮ ಹೈಕೋರ್ಟಿನ ಗೌರವ ಪ್ರತಿಷ್ಠೆಗಳು ಉಳಿಯಲು ಅನುಕೂಲವಾಗಿದೆ. ಹಿಂದೆ ಡಿಸ್ಟ್ರಿಕ್ಟು ಕೋರ್ಟುಗಳಲ್ಲಿ, ನ್ಯಾಯಾಧೀಶರಾಗಿದ್ದವರು ಎರಡು ಗಂಟೆಗೆ ಕೋರ್ಟಿಗೆ ಬರುತ್ತಿದ್ದರು. ಈಗ ಈ ನೂತನ ಜಡ್ಜಿಗಳು ಬಂದನಂತರ ಡಿಸ್ಟ್ರಿಕ್ಟು ಕೋರ್ಟುಗಳಲ್ಲಿ ಮತ್ತು ಇತರ ಕೋರ್ಟುಗಳಲ್ಲಿ ಕಾಲಕ್ಕೆ ಸರಿಯಾಗಿ 11 ಗಂಟೆಗೇ ಕೋರ್ಟಿಗೆ ಬರುತ್ತಿದ್ದಾರೆ. ಇದರಿಂದ

ಜಾಸ್ತಿ ಕೇಸುಗಳನ್ನು ತೆಗೆದುಕೊಳ್ಳಲು ಅನುಕೂಲವಾಯಿತು. ಹೀಗೆ ಈಗ ಅನೇಕ ವರ್ಷಗಳಿಂದ ತೀರ್ಮಾನವಾಗದಿರುವ ಕೇಸುಗಳನ್ನು ಈಗ ತೀರ್ಮಾನ ಮಾಡುತ್ತಿರುವುದು ನಿಜವಾಗಿಯೂ ಸಂತೋಷದ ವಿಚಾರ. ನಮ್ಮ ಸರಕಾರಕ್ಕೇ ಮುಖ್ಯ ನ್ಯಾಯಾಧೀಶರನ್ನು ನೇಮಿಸುವ ಈ ಅಧಿಕಾರ ಇದ್ದಿದ್ದರೆ ಇಂತಹ ಅವಕಾಶ ಸಿಕ್ಕುತ್ತಿತ್ತೋ ಇಲ್ಲವೋ ಎಂದು ಅನುಮಾನಪಡಬೇಕಾಗಿದೆ.

Just because a non-Mysorean has come, the Court has got some prestige. ಇಷ್ಟನ್ನು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, 1958-1959ನೆಯ ಸಾಲಿನಲ್ಲಿ ನ್ಯಾಯಾಂಗದ ಬಾಬಿಗಾಗಿ ನಮ್ಮ ಮುಂದೆ ಇಟ್ಟಿರತಕ್ಕ 69,58,000 ರೂಪಾಯಿಗಳ ಬಡ್ಜೆಟ್ಟಿಗೆ ನನ್ನ ಅನುಮೋದನೆಯನ್ನು ಕೊಡುತ್ತ ಒಂದೆರಡು ಸಲಹೆಗಳನ್ನು ಸೂಚನೆ ಮಾಡಲಿಚ್ಛಿಸುತ್ತೇನೆ.

ಸ್ವಾಮೀ, ಸಂಸ್ಥಾನದಲ್ಲಿ ಜೈಲುಗಳನ್ನ ನಡೆಸಲು ಮತ್ತು ಜೈಲುಗಳನ್ನು ನೋಡಿಕೊಳ್ಳುವುದಕ್ಕಾಗಿ 34,63,000 ರೂಪಾಯಿಗಳನ್ನು ಖರ್ಚುಮಾಡುವುದೇನೋ ಸರಿ. ಆದರೆ ಇಷ್ಟೊಂದು ಸಾರ್ವಜನಿಕರ ಹಣವನ್ನು ವಿನಿಯೋಗಿಸುತ್ತಿರುವಾಗ ಈ ಜೈಲಿನಲ್ಲಿರುವ ಖೈದಿಗಳ ಮನಸ್ಸನ್ನು ಪರಿವರ್ತನೆಯಾಗುವಂತೆ ಮಾಡಿ ಸತ್ಪ್ರಜೆಗಳಾಗುವಂತಹ ಸುಧಾರಣೆಗಳೇನೂ ಆಗಿಲ್ಲ. ಹೀಗೆ ಇದನ್ನು ನೋಡುವಾಗ ಮನಸ್ಸಿಗೆ ತುಂಬಾ ನಿರಾಶೆಯಾಗುತ್ತದೆ. ಸಮಾಜದಲ್ಲಿರತಕ್ಕ ಏರುಪೇರುಗಳು, ದರಿದ್ರಾವಸ್ಥೆ ಮತ್ತು ಇನ್ನಿತರ ಕಾರಣಗಳಿಂದ ಅನೇಕ ಜನರು ಜೈಲುಗಳಿಗೆ ಹೋಗುತ್ತಾರೆ. ಹೀಗೆ ಹೋಗುವ ಖೈದಿಗಳಲ್ಲಿ ಮಹಿಳೆಯರೂ ಮತ್ತು ಪುರುಷರೂ ಇರುತ್ತಾರೆ. ಬಹಳವಾಗಿ ಈ ಖೈದಿಗಳಪೈಕಿ ತಿಳಿವಳಿಕೆಯಿಲ್ಲದ ಸಣ್ಣ ವಯಸ್ಸಿನ ಹುಡುಗರೂ ಇರುತ್ತಾರೆ. ಇವರ ಮನಸ್ಸು ಪರಿವರ್ತನೆಯಾಗುವಂತಹ ಶಿಕ್ಷಣವನ್ನು ಕೊಟ್ಟು ಅವರು ಮುಂದೆ ಜೈಲಿನಿಂದ ಹೊರಗೆ ಬಂದ ಮೇಲೆ ಅವರೇ ಸ್ವತಃ ತಮ್ಮ ಕಾಲಿನ ಮೇಲೆ ನಿಂತು ಜೀವನವನ್ನು ನಡೆಸುವಂತಹ ಸುಧಾರಣೆಗಳಾವವನ್ನೂ ಮಾಡಿಲ್ಲ ಎಂದು ಹೇಳಬೇಕಾಗಿದೆ. ಮಾನ್ಯ ವಿದ್ಯಾ ಮಂತ್ರಿಗಳು ಈಚೆಗೆ ಒಂದು ಸೂಚನೆಯನ್ನು ಕೊಟ್ಟರು. ಎಲ್ಲ ಕಡೆಗಳಲ್ಲಿಯೂ ಮಲ್ಟಿಪರ್ಪಸ್ ಸ್ಕೂಲುಗಳನ್ನು ತೆರೆಯಬೇಕೆಂದು ಅವರು ಸೂಚನೆಯನ್ನು ಕೊಟ್ಟರು. ಇಂತಹ ಶಿಕ್ಷಣವನ್ನು ಜೈಲುಗಳಲ್ಲಿ ಜಾರಿಗೆ ತೆಗೆದುಕೊಂಡು ಬಂದು ಅಲ್ಲಿರುವ ಬಾಲ ಖೈದಿಗಳಿಗೆ ಶಿಕ್ಷಣವನ್ನು ಕೊಡಿಸಿ, ಅವರು ಜೈಲಿನಿಂದ ಹೊರಗಡೆ ಬಂದಾಗ ಉತ್ತಮವಾದ ಜೀವನವನ್ನು ಮಾಡತಕ್ಕ ಏರ್ಪಾಡು ಮಾಡಬೇಕು. ಇನ್ನು ಮಹಿಳೆಯರ ಟ್ರೇನಿಂಗಿನ ವಿಚಾರವಾಗಿ ಹೇಳಬೇಕಾದರೆ, ಅವರ ಸಂಖ್ಯೆ ಹೆಚ್ಚಾಗಿಲ್ಲದಿದ್ದರೂ ಸಾಕಷ್ಟು ಪ್ರಮಾಣದಲ್ಲಿದೆ. ಅವರುಗಳಿಗೆ ಈಗ ಬೆಂಗಳೂರಿನಲ್ಲಿರುವ ಸೆಂಟ್ರಲ್ ಜೈಲಿನಲ್ಲಿ ಕೈಗಾರಿಕೆಗಳಲ್ಲಿ ಎಂದರೆ, ನೇಯ್ಗೆ ಮತ್ತು ಇತರ ಕೈಗಾರಿಕೆಗಳಲ್ಲಿ ತರಬೇತನ್ನು ಕೊಡುತ್ತಿದ್ದಾರೆ. ಅವರುಗಳು ತರಬೇತನ್ನು ಪಡೆದು ಜೈಲುಗಳಿಂದ ಬಿಡುಗಡೆಯಾಗಿ ಹೊರಗಡೆ ಇಂತಹ ಕೈಗಾರಿಕೆಗಳನ್ನು ತಾವೇ ಸ್ವತಃ ಮಾಡಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಸ್ವಲ್ಪ ಮಟ್ಟಿಗೆ ಧನ ಸಹಾಯವನ್ನು ಕೊಟ್ಟು ಅದನ್ನು ಸುಲಭ ಕಂತುಗಳಲ್ಲಿ ವಾಪಸ್ಸು ಪಡೆಯುವಂತೆ ಏರ್ಪಾಡನ್ನು ಮಾಡಿದರೆ ಇಂತಹ ಮಹಿಳೆಯರಿಗೆ ಬಹಳವಾದ ಅನುಕೂಲವಾಗುತ್ತದೆ. ಈ ರೀತಿಯಾದ ಏರ್ಪಾಡನ್ನು ಮಾಡಬೇಕಾದ ಅಗತ್ಯವಿದೆ. ಈಗೇನೋ ಕೆಲಸವನ್ನು ಜೈಲುಗಳಲ್ಲಿ ಒದಗಿಸುತ್ತಿದ್ದಾರೆ. ಇದರಲ್ಲಿ ನೇಯ್ಗೆ ಕೈಗಾರಿಕೆ, ಬೆತ್ತ ಹೆಣೆಯುವುದು ಮತ್ತು ಇತರ ಕೈಗಾರಿಕೆಗಳನ್ನು ಮಾಡುವುದರಲ್ಲಿ ಹೆಚ್ಚಿನ ಗಮನ ಕೊಡುತ್ತಿದ್ದಾರೆ. ಆದರೆ ಈ ಕೈಗಾರಿಕೆಗಳನ್ನು ಮಾಡುವಾಗ ನಾಲ್ಕಾಣೆಯಂತೆ ಮಾತ್ರ ಇವರಿಗೆ ಸಂಭಾವನೆ ರೂಪದಲ್ಲಿ ಕೊಡುತ್ತಿದ್ದಾರೆ ಎಂದು ಕೇಳಿದ್ದೇನೆ. ಹೀಗೆ ಕೇವಲ ನಾಲ್ಕಾಣೆಯನ್ನು ಕೊಡುವುದರಿಂದ ಈ ಕೆಲಸವನ್ನು ಮಾಡುವವರಿಗೆ ಅದರಲ್ಲಿ ಅಭಿರುಚಿ ಇರುವುದಿಲ್ಲ ಮತ್ತು ಇದರಿಂದಾಗಿ ಶ್ರದ್ಧೆಯಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ಈ ರೀತಿಯಾಗಿ ಶಿಕ್ಷಣದಲ್ಲಿ ಸಾಕಷ್ಟು ಪರಿಶ್ರಮಹೊಂದಿ ಸ್ವತಃ ಅವರೇ ತಯಾರು ಮಾಡುವ ಶಕ್ತಿಯನ್ನು ಪಡೆದ ಮೇಲೆ ಅವರುಗಳಿಗೆ ಅವರು ಮಾಡಿದ ಕೆಲಸಕ್ಕೆ ಹೊರಗಡೆಯಲ್ಲಿ ಏನು ಕೂಲಿ ದೊರೆಯುತ್ತದೆಯೋ ಅಷ್ಟು ಕೂಲಿಯನ್ನು ಎಂದರೆ ಸುಮಾರು ಮೂರೂವರೆ ರೂಪಾಯಿಗಳಿಂದ ನಾಲ್ಕು ರೂಪಾಯಿಗಳವರೆಗೆ, ಕೊಟ್ಟರೆ ಅನುಕೂಲವಾಗುತ್ತದೆ. ಹೀಗೆ ಮಾಡಿದ ಕೆಲಸಕ್ಕೆ ಎಷ್ಟು ಹಣ ಬೇಕಾಗುತ್ತದೆಯೋ ಅಷ್ಟನ್ನು ಉಪಯೋಗಿಸಿಕೊಂಡು ಉಳಿಕೆಯಾದ ಹಣವನ್ನು ಅವರ ಸಂಸಾರಕ್ಕೆ ಉಪಯೋಗಿಸಿದ ಪಕ್ಷದಲ್ಲಿ ಅವರಲ್ಲಿ ಕೆಲಸ ಮಾಡಲು ಒಂದು ರೀತಿಯಾದ ಶ್ರದ್ಧೆ ಬರುತ್ತದೆ, ಉತ್ಸಾಹ ಬರುತ್ತದೆ ಮತ್ತು ಅವರ ಮನೆಯವರು ಬದುಕಿಕೊಳ್ಳಲೂ ಒಂದು ಮಾರ್ಗವಾಗುವುದು. ಈ ರೀತಿಯಾದ ಏರ್ಪಾಡುಗಳನ್ನು ಮಾಡಿ ಸಹಾಯ ಮಾಡಬೇಕಾಗಿದೆ. ಇದನ್ನು ಮಾಡದೆ ಹೋದರೆ ಜೈಲಿನ ಸುಧಾರಣೆ ಎಂದೆಂದಿಗೂ ಆಗುವುದಿಲ್ಲ ಎಂದು ನನಗೆನಿಸುತ್ತದೆ.

ಇನ್ನು ಜೈಲಿನ ಮೇಲ್ವಿಚಾರಣೆಯನ್ನು ನಡೆಸತಕ್ಕಂಥವರಿಗೆ ಮತ್ತು ಅಧಿಕಾರಿಗಳಿಗೆ ಜೈಲುವಾಸಿಗಳ ಮನಸ್ಸು ಪರಿವರ್ತನೆ ಆಗುವಂತೆ ಮಾಡಲು ಶಿಕ್ಷಣ ಕೊಡುವಂಥಾದ್ದು ಇಲ್ಲದೆ ಹೋಗಿದೆ. ಇದು ಬಹಳ ಅತ್ಯಗತ್ಯವಾಗಿ ಆಗಬೇಕು. ವಿದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಮಾನಸಿಕ ಪರಿವರ್ತನೆಗೆ ಸಂಬಂಧಪಟ್ಟ ವಿದ್ಯಾಭ್ಯಾಸ ಕ್ರಮವನ್ನು ಎರಡು ವರ್ಷ ಏರ್ಪಡಿಸಿ ಅದರಲ್ಲಿ ಉತ್ತೀರ್ಣರಾದವರಿಗೆ ಪದವಿಯನ್ನು ಕೊಡುವ ಏರ್ಪಾಡುಮಾಡಿದ್ದಾರೆಂದು ಕೇಳಿದ್ದೇನೆ. ಅಂಥ ಶಿಕ್ಷಣ ನಮ್ಮ ದೇಶದಲ್ಲಿಯೂ ಜಾರಿಗೆ ಬರಬೇಕು. ತಮ್ಮ ಶ್ರದ್ಧೆಯಿಂದ ಜೈಲುವಾಸಿಗಳ ಮನೋವೃತ್ತಿಯನ್ನು ಅರಿತು ಅವರ ಮನಸ್ಸಿಗೆ ಹಿಡಿಯುವಂತೆ ಹೇಳಿ ದೇಶದ ಸತ್ಪ್ರಜೆಗಳಾಗುವಂತೆ ಅವರಿಗೆ ಜ್ಞಾನ, ಬುದ್ಧಿ ಬರುವಂತೆ ಮಾಡುವ ಶಕ್ತಿ ಜೈಲು ಅಧಿಕಾರಿಗಳಿಗೆ ಬರಬೇಕು. ಈ ರೀತಿ ಏರ್ಪಾಡನ್ನು ಮಾಡಬೇಕು ಎಂದು ಸೂಚಿಸಿ ಈ ಬೇಡಿಕೆಯನ್ನು ಅನುಮೋದಿಸುತ್ತೇನೆ.

Sri V. P. DEENADAYALU NAIDU (Cubbonpet).—Mr. Speaker, Sir, I wish to suggest only two aspects while accepting this Demand. The first item I would like to touch is a mobile court. This question of mobile court has been before us for some time. I think there is necessity and it has been very prominently felt. To start with, it has already been experimented and found successful in all cities. I think at least in the Bangalore Corpora-

(SRI V. P. DEENADAYALU NAIDU)

tion area, the starting of a mobile court immediately is very necessary. I do not see why so much of time has been spent in other matters in trying to bring this into force. It needs very little for me to emphasise the necessity of having a mobile court. In fact, we are encountered with difficulties relating to public health and unauthorised constructions and unauthorised activities like development of slum areas. We are finding ourselves almost impossible to tackle them without certain legislation. Then there are certain building encroachments and public street vending, vending in trains and people consuming some of these articles. All these illegal activities and unauthorised activities can be put an end to by having a mobile magesterial court. Then, Sir, I may say that it is also remunerative. We could collect fines on the spot and we can inflict punishment. We can recover more money and the money that may have to be spent on establishment and conveyance will be very little when compared to the revenue that is going to be collected under that system. Unfortunately, the matter is pending in spite of the Corporation and other bodies agitating for having a mobile court. Therefore I say that is one of the items which should have prominently found a place in the Budget, but I find that by some inadvertence or oversight it has been dropped. I know that file must be somewhere but it will have to be unearthed and this should be implemented at a very early date. The second question which I some time ago referred to is with regard to charges. On page 38 of the Budget Memorandum, mention is made of fees to Advocates employed on behalf of Government. I once again emphasise that if Government is really serious about giving justice, no Advocate will come for Rs. 16 per day which is paid for advocates who are engaged by the Government. No decent advocate will come and nobody will come forth to accept any brief for such a meagre sum. Therefore we are denying justice. My point is that these charges should be revised and it should be made a little more dignified.

Sri B. BASAVALINGAPPA.—Is it the opinion of the Hon'ble Member that advocates who receive more than Rs. 16 are decent advocates ?

Sri V. P. DEENADAYALU NAIDU.—Let us not quarrel about it. Even a man who may receive a thousand rupees may be accused of breach of duties. Even God cannot be responsible for that; much less a legislator like Sri Basavalingappa. At least let us say that we will do honorary work, and not for the sake of Rs. 16. I will do honorary work and my work is according to my conscience. Whether you pay Rs. 16 or Rs. 1,600 is immaterial; but when you say that the Government has to engage a particular Counsel, let it also be said that expect them to do it in a proper and dignified way which does justice both to the Counsel as well as to the person who engages him. It does not become a Government to engage advocates, prosecutors and standing Counsels on Rs. 16 a day to deal with murder cases, and cases charge under 302. There may be most important cases of the highest magnitude. I think it does not require me to explain to Sri Baliga all this. Therefore, I would very humbly urge the Government to revise the rules in that regard. Then there is another idea which I would like to place before the Government. Who are the prosecutors in criminal courts ? The prosecutors in all these criminal courts still continue to be police officers. I think it is high time that we think of having advocates replacing the police officers as prosecutors in criminal courts. We must have technical men. I even go a step further and include the Home Department and say that even for police investigation at the time of placing your charge sheets you must have technical legal men; charge sheets must be scrutinised according to law; they must be pursued; you must have a technical section for placing charge sheets and not merely ordinary police officers going into these matters. I would tell you if you could only think of having a technical section to scrutinise these things and then place a charge sheet, you would be doing real justice, pursuing cases where you ought to, and

and dropping cases where you should not pursue and where there is no case. You will be thus saving your money; you will be doing things in the right direction and you will be giving proper advice in the right time. Then, Sir, I very well appreciate what Sri Malla-radhya said with regard to Advocate General's Office. One thing he has missed is this. Today, 50 per cent of the High Court work is Government work, *i.e.*, writs where the Government appear. What I say is, the bulk of the work that has accumulated in the High Court is Government work. My friend raised the point whether there was any necessity to have an Advocate General, two Advocates to support him and 4 or 5 more Government Pleaders. I say the work that they have to do is Government work and not private work where private counsels appear. Most of the cases in the High Court are those in which Government figure very prominently; at least more than 50 per cent is Government work and therefore the Government will have to have so many Advocates appointed. My friend also went a step further and asked in which other State in India they had such a big paraphernalia to conduct the cases. Sir, I think, we are moving in the right direction. Even in the matter of having administration of justice, we are moving in the right direction. But, I shall only say that there is a necessity for reorganisation of the High Court and the Advocate-General and it is being done and done in consonance with the other High Courts.

Sir, the last point which I wish to place before the House is with regard to the Mental Hospital at Bangalore. This Hospital has today become an All-India institution. I ask the Government whether they have gone to that hospital and looked into the state of affairs there. Certain under-trial prisoners are taken to that hospital at the instance of the Magistrate Courts and no distinction is made between these undertrials and the persons who are suffering from chronic mental disorders.

[MR. SPEAKER in the Chair]

A person who has a chance to recover and a person who is suffering from chronic mental disorder are clubbed and put together. Sir, is there any chance for that person to recover under these circumstances? They have taken away even the remote chance of his recovery. I request the Government to kindly look into this matter and bifurcate and keep them in a separate compartment. At present, people who can be cured in weeks remain for months. For want of convenience, a person should not be put to such a position. I think that Government have not bestowed sufficient thought over this matter. For providing separate compartments it may not cost Government much. I only hope that they would at least pay heed to this now

*ಶ್ರೀ ವೈ. ರಾಮಕೃಷ್ಣ (ಬೆಂಗಳೂರು ನಾರ್ತ್).—ಮಾನ್ಯ ಅಧ್ಯಕ್ಷರೆ, ನ್ಯಾಯಾಂಗ ಹಾಗೂ ಜೈಲುಗಳಿಗೆ ಸಂಬಂಧಪಟ್ಟ ಬೇಡಿಕೆಗಳಿಗೆ ಬೆಂಬಲ ನೀಡುತ್ತಾ, ಕೆಲವಾರು ವಿಷಯಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸಬೇಕೆಂಬ ಕೂಗು ಅನೇಕ ವರ್ಷಗಳಿಂದ ಇದೆ. ಈ ವಿಚಾರದಲ್ಲಿ ಸರ್ಕಾರದವರು ಆಗಲೇ ಕೆಲವಾರು ವಿಷಯಗಳನ್ನು ತಿಳಿಸಿದ್ದಾರೆ ಮತ್ತು ಅದರ ಪ್ರಕಾರ ಮಾಡಿದ್ದಾರೆ. ಅವುಗಳಲ್ಲಿ ಅತಿ ಮುಖ್ಯವಾದುದು ಎಂದರೆ ಪೋಲೀಸ್ ಪ್ರಾಸಿಕ್ಯುಟಿಂಗ್ ಇನ್ಸ್‌ಪೆಕ್ಟರುಗಳು. ಮೇಜಿಸ್ಟ್ರೇಟ್ ಕೋರ್ಟುಗಳಲ್ಲಿ ಅವರುಗಳು ಇನ್ನೂ ಉಳಿದಿದ್ದಾರೆ. ಈ ಸಂಬಂಧದಲ್ಲಿ ಅನೇಕ ಪ್ರಶ್ನೆಗಳೂ ಬಂದಿವೆ. ಈ ವಿಚಾರದಲ್ಲಿ ಆದಷ್ಟು ಜಾಗ್ರತೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ ಸುಮಾರು ಒಂದು ವರ್ಷದ ಮೇಲಾಯಿತು. ಆದರೂ ಇವರುಗಳನ್ನು ತೆಗೆದುಹಾಕುವ ಸಲಹೆ ಸಫಲವಾಗಿಲ್ಲ. ಸರ್ಕಾರದವರು ಆದಷ್ಟು ಜಾಗ್ರತೆ ಈ ಸಲಹೆಯನ್ನು ಈಡೇರಿಸಿಕೊಡಬೇಕು.

ಇರುವ ಆಸ್ತಿಗಳ ಪೈಕಿ, ಲೀಗಲ್ ಬಾರ್ ಬಹಳ ದೊಡ್ಡ ಆಸ್ತಿ. ನಾಗರಿಕರ ಹಕ್ಕುಭಾದ್ಯತೆಗಳನ್ನು ಕಾಪಾಡುವುದರಲ್ಲಿ ಅದು ಅಗ್ರಸ್ಥಾನವನ್ನು ಪಡೆದಿದೆ. ಈ ಬಾರ್ ಏನಾದರೂ ಒಂದು ವಿಷಯವನ್ನು ಸರ್ಕಾರದ ಮುಂದೆ ಇಟ್ಟರೆ, ಅದನ್ನು ಸರ್ಕಾರ ಕಡೆಗಣ್ಣಿನಿಂದ ನೋಡುವುದು ತುಂಬ ವಿಷಾದಕರ. ನಾನು ಈ ಬೆಂಗಳೂರು ನಗರದಲ್ಲಿರತಕ್ಕಂಥ ಒಬ್ಬ ಸದಸ್ಯನಾಗಿ ಹೇಳುತ್ತಿದ್ದೇನೆ. ಇಲ್ಲಿ ಲಾಯರುಗಳಿಗೆ ಅನೇಕ ಕಷ್ಟಗಳಿವೆ. ಉದಾಹರಣೆಗೆ, ವಿಧಾನ ಸೌಧಕ್ಕೆ ತಳಹದಿ ಹಾಕಿದಾರಭ್ಯದಿಂದ, ಬೆಂಗಳೂರಿನಲ್ಲಿರತಕ್ಕಂಥ ಕೋರ್ಟುಗಳಿಗೆಲ್ಲಾ ಒಂದೇ ಕಡೆ ಜಾಗ ಪ್ರೊವೈಡ್ ಮಾಡಿ ಎಂದು ಹೇಳುತ್ತಿದ್ದೇವೆ. ಶ್ರೀ ಹನುಮಂತಯ್ಯನವರು ಮುಖ್ಯ ಮಂತ್ರಿಗಳಾಗಿದ್ದಾಗ ಒಪ್ಪಿಕೊಂಡಿದ್ದರು. ಇವೊತ್ತಿನ ದಿವಸ ಬೆಂಗಳೂರು ನಗರದಲ್ಲಿ ಕೋರ್ಟುಗಳು ಅನೇಕ ಕಡೆ ಇವೆ. ಕ್ರಿಮಿನಲ್ ಕೋರ್ಟುಗಳು ಒಂದು ಕಡೆ ಹೈಕೋರ್ಟ್ ಒಂದು ಕಡೆ, ಡಿಸ್ಟ್ರಿಕ್ಟ್ ಕೋರ್ಟ್ ಒಂದು ಕಡೆ, ಟ್ರಿಬ್ಯೂನಲ್,

(ಶ್ರೀ ವೈ. ರಾಮಕೃಷ್ಣ)

ರೆವಿನ್ಯೂ ಬೋರ್ಡ್ ಒಂದು ಕಡೆ. ಸಿವಿಲ್ ಸ್ಟೇಷನ್‌ನಲ್ಲಿ ಕೆಲವು ಕೋರ್ಟುಗಳಿವೆ. ಇದರಿಂದ ವಕೀಲರಿಗೆ ತುಂಬ ಅನಾನುಕೂಲವಾಗಿದೆ. ಹನ್ನೊಂದು ಘಂಟೆಗೆ ಅನೇಕ ಕಡೆ ಹೋಗಬೇಕೆಂದರೆ ಬಹಳ ಕಷ್ಟ. ಇದಕ್ಕೋಸ್ಕರವಾಗಿ ಎಲ್ಲಾ ಕೋರ್ಟುಗಳನ್ನೂ ಅಠಾರಾ ಕಚೇರಿಯಲ್ಲಿ ಇಡುವಹಾಗೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರದ ಮುಂದೆ ಬೇಡಿಕೆ ಇಡುತ್ತೇನೆ. ಸರ್ಕಾರದವರು ಈ ಸಲಹೆಯನ್ನು ಬಹಳ ತೀವ್ರವಾಗಿ ಪರಿಶೀಲನೆಮಾಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನ್ಯಾಯ ಆದಷ್ಟು ಜಾಗ್ರತೆ ದೊರೆಯಬೇಕು ಮತ್ತು ದೊರೆಯತಕ್ಕಂಥ ನ್ಯಾಯ ಅದಷ್ಟು ಸುಲಭದರದಲ್ಲಿ ದೊರಕಬೇಕು. ಹಳೆಯ ಮೈಸೂರಿನಲ್ಲಿ ಯಾವ ಸ್ಥಳಗಳಿಗೆ ಹೊಸದಾಗಿ ಕೋರ್ಟುಗಳು ಬೇಕು, ಇರತಕ್ಕಂಥ ಕೋರ್ಟುಗಳಲ್ಲಿ ಎಷ್ಟನ್ನು ಕಡಮೆಮಾಡಬಹುದೆಂಬುದನ್ನು ವಿಚಾರ ಮಾಡುವುದಕ್ಕೋಸ್ಕರ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮೈಸೂರು ಸರ್ಕಾರದವರು ನೇಮಕಮಾಡಿದ್ದರು. ಆ ಸಮಿತಿಯವರು ದೇಶಾದ್ಯಂತ ತಿರುಗಿ ಅನೇಕ ವಿಷಯಗಳನ್ನು ಮತ್ತು ಸಲಹೆಗಳನ್ನು ಕ್ರೋಡೀಕರಿಸಿ ಒಂದು ರಿಪೋರ್ಟ್ ಮಾಡಿದರು. ಈ ಸಮಿತಿಯ ವರದಿಯನ್ನು ಜಾರಿಗೆ ತಂದರೆ ದೇಶಕ್ಕೆ ಒಳ್ಳೆಯದು.

ಕೋರ್ಟುಗಳಲ್ಲಿ ಕ್ಲಾರ್ಕ್ಸ್ ಆಗಿದ್ದವರನ್ನು ಮ್ಯಾಜಿಸ್ಟ್ರೇಟ್, ಮುನ್ಸೀಫ್ ಆಗಿ ನೇಮಕಮಾಡುತ್ತಿದ್ದಾರೆ. ಇದನ್ನು ನಿಲ್ಲಿಸುವುದು ಒಳ್ಳೆಯದೆಂದು ನನ್ನ ಭಾವನೆ. ಹೀಗೆ ನೇಮಕಮಾಡುವುದರ ಸಾಧಕ ಬಾಧಕಗಳನ್ನು ಐದು ನಿಮಿಷದಲ್ಲಿ ಚರ್ಚೆಮಾಡಲಿಕ್ಕೆ ಸಾಧ್ಯವಿಲ್ಲ. ಸರ್ಕಾರದವರು ಹೈಕೋರ್ಟ್ ಜಡ್ಜ್‌ಗಳನ್ನೂ ಡಿಸ್ಟ್ರಿಕ್ಟ್ ಜಡ್ಜ್‌ಗಳನ್ನೂ ಸಿವಿಲ್ ಜಡ್ಜ್‌ಗಳನ್ನೂ ನೇಮಕ ಮಾಡುವಾಗ ಕೊನೆಯ ಪಕ್ಷ ಶೇಕಡ 75ರಷ್ಟು ಮಂದಿಯನ್ನು ಬಾರ್‌ನಿಂದ ತೆಗೆದುಕೊಳ್ಳಬೇಕೆಂದು ವಿನಯದಿಂದ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಏಕೆಂದರೆ ಹತ್ತು ವರ್ಷಗಳಿಂದ ವಕೀಲರ ಸಂಖ್ಯೆ ಎರಡು ಸಾವಿರಕ್ಕೂ ಮೀರಿದೆ. ನೂರಕ್ಕೆ ನೂರರಷ್ಟು ಜಾಸ್ತಿಯಾಗುತ್ತಿದೆ. ಅವರ ಸ್ಥಿತಿ ಹೇಳುವುದಕ್ಕಾಗುವುದಿಲ್ಲ. ದಯೆಯಿಟ್ಟು ಸರ್ಕಾರದವರು ಈ ಹುದ್ದೆಗಳಿಗೆಶೇಕಡ 70ರಷ್ಟನ್ನಾದರೂ ಬಾರ್‌ನಿಂದ ತೆಗೆದುಕೊಳ್ಳಬೇಕು.

ಈ ರೀತಿ ತೆಗೆದುಕೊಳ್ಳುವಾಗ, ಶೇಕಡ 18 ರಷ್ಟು ಸ್ಥಾನಗಳನ್ನು ನಿಮ್ನವರ್ಗದವರಿಗೆ ಕಡ್ಡಾಯವಾಗಿ ಕೊಡಬೇಕು. ಈ ನೀತಿಯನ್ನು ಇಟ್ಟುಕೊಂಡರೆ ದೇಶಕ್ಕೆ ಕ್ಷೇಮಕರ. ಈ ನೀತಿಯನ್ನು ಅನುಸರಿಸದಿದ್ದರೆ ಇನ್ನು 50 ವರ್ಷಗಳಾದರೂ, ಶೇಕಡ 18 ರಷ್ಟು ನಿಮ್ನ ವರ್ಗದವರನ್ನು ಜುಡಿಷಿಯರಿಯಲ್ಲಿ ನೋಡುವುದಕ್ಕಾಗುವುದಿಲ್ಲ. ಇವೊತ್ತಿನ ದಿವಸ ಮೈಸೂರು ಸ್ಟೇಟ್‌ನಲ್ಲಿ, ಒಬ್ಬರು ಡಿಸ್ಟ್ರಿಕ್ಟ್ ಜಡ್ಜ್, ಇನ್ನೊಬ್ಬರು ಮ್ಯಾಜಿಸ್ಟ್ರೇಟ್ ಇಬ್ಬರೇ ಇಬ್ಬರು ನಿಮ್ನ ವರ್ಗದವರಿರುವುದು ತುಂಬ ವಿಷಾದಕರ. ಜೊತೆಗೆ ತಾವು ಪಬ್ಲಿಕ್ ಪ್ರಾಸಿಕ್ಯೂಟರ್, ಅಫಿಷಿಯಲ್ ರಿಸೀವರ್, ಅಸಿಸ್ಟೆಂಟ್ ಅಡ್ವೋಕೇಟ್ ಜನರಲ್, ಲೀಗಲ್ ಆಡ್ವೈಜರ್ ಮುಂತಾದವರುಗಳನ್ನು ತೆಗೆದುಕೊಳ್ಳುವಾಗ ಹರಿಜನರಿಗೂ ಕೂಡ ಮಾನ್ಯತೆ ಕೊಡಬೇಕು. ಶೇಕಡ ಹದಿನೆಂಟರಷ್ಟು ಸ್ಥಾನಗಳನ್ನು ಹರಿಜನರಿಗೆ ಪೂರ್ಣವಾಗಿ ಕೊಡಬೇಕು, ಇಲ್ಲದಿದ್ದರೆ ಕಷ್ಟ.

ಇನ್ನು ಬೆಂಗಳೂರು ಕೋರ್ಟುಗಳು ಹೇಗಿವೆಯೆಂಬುದನ್ನು ಹೇಳುತ್ತೇನೆ. ಈ ದಿವಸ ಮಾನ್ಯ ಮಂತ್ರಿಗಳು ಹನ್ನೊಂದು ಗಂಟೆಗೆ ಕೋರ್ಟಿನ ಹತ್ತಿರ ಬಂದು ನೋಡಿದರೆ ಅದರ ಸ್ಥಿತಿ ಹೇಗಿದೆಯೆಂಬುದು ಅವರಿಗೆ ಚೆನ್ನಾಗಿ ಗೊತ್ತಾಗುತ್ತದೆ. ಕೋರ್ಟಿರುವ ಕಟ್ಟಡಗಳನ್ನು ನೋಡಿದರೆ ಕೋರ್ಟೆಂದು ಕರೆಯುವ ಸ್ಥಿತಿಯಲ್ಲೇ ಇಲ್ಲ. ಸೆಕೆಂಡ್ ಅಡೀಷನಲ್ ಡಿಸ್ಟ್ರಿಕ್ಟ್ ಕೋರ್ಟು ಮತ್ತು ಸೆಕೆಂಡ್ ಮುನ್ಸೀಫ್ಸ್ ಕೋರ್ಟು ಈ ಎರಡು ಕೋರ್ಟುಗಳಲ್ಲೂ ಕಕ್ಷಿಗಾರರು ವರಾಂಡಗಳಲ್ಲಿ ನಿಂತಿರಬೇಕು. ಕೂಗಿದ ತಕ್ಷಣ ಅವರು ಕೋರ್ಟಿನೊಳಕ್ಕೆ ಹೋಗುವುದಕ್ಕೆ ಅವಕಾಶವೇ ಇರುವುದಿಲ್ಲ. ಹೀಗಾಗಿ ಕಕ್ಷಿಗಾರರು ಕೋರ್ಟಿನೊಳಕ್ಕೆ ಹೋಗುವುದರೊಳಗಾಗಿ ಎಕ್ಸ್‌ಪಾರ್ಟಿ ಡಿಕ್ರಿ ಆಗಿರುತ್ತದೆ. ಇದರಿಂದ ತುಂಬ ಅನಾನುಕೂಲವಾಗಿದೆ. ಕೋರ್ಟುಗಳಲ್ಲಿರುವ ಫರ್ನಿಚರ್ ಕೋರ್ಟು ಸ್ಥಾಪನೆಯಾದಾಗ ಕೊಟ್ಟಿರುವುದೆಂದು ಕಾಣುತ್ತದೆ. ಒಂದಕ್ಕೆ ಕೈಯಿಲ್ಲ, ಒಂದಕ್ಕೆ ಕಾಲಿಲ್ಲ, ಹೀಗಿದೆ. ದಯವಿಟ್ಟು ಈಗಲಾದರೂ ಕೋರ್ಟುಗಳಿಗೆ ಒಳ್ಳೆಯ ಫರ್ನಿಚರನ್ನೊದಗಿಸಿ ಸ್ಟೇಷನರಿಯನ್ನೂ ಸಾಕಷ್ಟು ಸರಬಾಯಿ ಮಾಡಬೇಕು.

ಪಾನನಿರೋಧದ ಸಂಬಂಧದಲ್ಲಿ ತಪ್ಪಿತಸ್ಥರಿಗೆ ಈಗ ಶಿಕ್ಷೆಯೇನೋ ಆಗುತ್ತಿದೆ. ಅದು ಸಾಲದು. ಫೈನ್ ಮತ್ತು ಡೆಟರೆಂಟ್ ಪನಿಷ್‌ಮೆಂಟ್ ಎರಡೂ ಇದ್ದರೆ ಅನುಕೂಲ, ಇಲ್ಲಿಸಿಟ್ ಡಿಸ್ಟಿಲೇಷನ್ ನಿಲ್ಲಿಸಬೇಕಾದರೆ ಈ ಎರಡು ಶಿಕ್ಷೆಯೂ ಇರಬೇಕು, ಈ ರೀತಿಯಾದರೆ ಅನುಕೂಲ ಎಂದು ಸಲಹೆ ಮಾಡುತ್ತೇನೆ.

ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಸ್ವಾಮಿ, ನ್ಯಾಯಾಂಗಕ್ಕೆ ಸಂಬಂಧಪಟ್ಟ ಬೇಡಿಕೆಯ ಬಗ್ಗೆ 78 ಲಕ್ಷ 91 ಸಾವಿರ ರೂಪಾಯಿಗಳನ್ನೊದಗಿಸಲಾಗಿದೆ. ಈ ಬಾಬಿನಲ್ಲಿ 16 ಲಕ್ಷ 30 ಸಾವಿರ ರೂಪಾಯಿಗಳ ಆದಾಯವಿದೆ. ಜ್ಯುಡಿಷಿಯರಿಗೆ ಜನರಲ್ ಸ್ಟಾಂಪ್ ಪೇಪರು ವಗೈರೆಗಳ ಮಾರಾಟದಿಂದ ಬೇರೆ ವರಮಾನ ಬರುತ್ತದೆ. ಆದಾಯಕ್ಕಿಂತ ಐದರಷ್ಟು ಹೆಚ್ಚಾಗಿ ಖರ್ಚು ಮಾಡುತ್ತಿದ್ದಾರೆ. ಕೋರ್ಟ್ ಫೀಜು ಸ್ಟಾಂಪು ವಗೈರೆಗಳ ಮಾರಾಟ ಮಾಡುವುದರಿಂದ 41 ಲಕ್ಷ 30 ಸಾವಿರ ರೂಪಾಯಿಗಳ ಆದಾಯ ಬರುತ್ತದೆ. ಶೇಕಡ 75 ಭಾಗ ಖರ್ಚಿಗಾಗಿ ಆದಾಯವನ್ನು ಉಪಯೋಗಿಸಿಕೊಂಡು ಈ ದಿವಸ ನ್ಯಾಯವನ್ನೊದಗಿಸಲಾಗುತ್ತಿದೆಯೆಂಬುದು ಅಂಕಿ ಅಂಶಗಳಿಂದ ವ್ಯಕ್ತವಾಗುತ್ತದೆ. ಇದು ನಿಜವಾಗಿಯೂ ಪ್ರಜಾಪ್ರಭುತ್ವದಲ್ಲ, ನಾಗರಿಕ ಯುಗದಲ್ಲಿ ಸಲ್ಲದ ವಿಷಯವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ದಿವಸ ಮಹಾಜನರಿಗೆ ಕೋರ್ಟು ಖರ್ಚು ಬಹಳ ಹೊರೆಯಾಗಿದೆ. ಜನತೆಯಮೇಲೆ ಹೆಚ್ಚು ಹೊರೆ ಹೇರಿ ನ್ಯಾಯ ದೊರಕಿಸಿದರೆ ಅದು ಹೇಗೆ ಸುಧಾರಣೆ ಮಾಡಿದಂತಾಗುತ್ತದೆ? ಸಮಾಜದಲ್ಲಿರುವ ಏರುಪೇರು ಕಡಮೆಮಾಡಲು ಹೀಗೆ ಮಾಡಿದರೆ ಸಾಧ್ಯವೇ? ಇದರಿಂದ ಯಾವ ರೀತಿ ಸಹಾಯವಾಗುತ್ತದೆಂದು ಕೇಳಬೇಕಾಗಿದೆ. ಇದು ಪ್ರಗತಿದಾಯಕವಲ್ಲ. ಈ ಬಾಬಿನಲ್ಲಿ ಆದಷ್ಟು ಆದಾಯ ಕಡಮೆ ಮಾಡಿಕೊಂಡು ಹೆಚ್ಚು ಖರ್ಚಿಲ್ಲದೆ ನ್ಯಾಯ ಸಾಮಾನ್ಯ ಜನರಿಗೂ ಸಿಕ್ಕುವ ಹಾಗೆ ಮಾಡಬೇಕು.

ಎರಡನೆಯದಾಗಿ ನ್ಯಾಯ ತೀರ್ಮಾನ ಆದಷ್ಟು ಬೇಗೆ ಆಗಬೇಕಾದ ಅವಶ್ಯಕತೆಯಿದೆಯೆಂದು ಮಾನ್ಯ ಮಿತ್ರರು ಹೇಳಿದ್ದಾರೆ. ಈ ದಿವಸ ಮದ್ರಾಸು ಸರ್ಕಾರದಲ್ಲಿ ಯಾವ ರೀತಿ ನ್ಯಾಯ ಪರಿಪಾಲನೆ ಯಾಗುತ್ತಿದೆಯೆಂದು ಎಂಬುದನ್ನು ಸ್ವಲ್ಪಮಟ್ಟಿಗಾದರೂ

ಸರ್ಕಾರದವರು ಗಮನಿಸಬೇಕೆಂದು ಹೇಳಬಯಸುತ್ತೇನೆ. ಮದ್ರಾಸಿನಲ್ಲಿ ಆರು ತಿಂಗಳಮೇಲೆ ಯಾವ ಕ್ರಿಮಿನಲ್ ಕೇಸೂ ನಿಲ್ಲುವುದಿಲ್ಲ, ಆರು ವಾರಗಳಲ್ಲಿ ಕೊಲೆಯ ಕೇಸು ಸೆಷನ್ಸ್‌ಗೆ ಗುರಿಯಾಗುತ್ತದೆ. ಅದೇ ರೀತಿ ಇಲ್ಲೂ ಕೂಡ ಅದಷ್ಟು ಬೇಗ ಮುಖ್ಯವಾಗಿ ಕ್ರಿಮಿನಲ್ ಕೇಸುಗಳನ್ನು ಫೈಸಲು ಮಾಡಲು ವ್ಯವಸ್ಥೆ ಮಾಡಬೇಕು.

ಇದಲ್ಲದೆ ಈ ದಿವಸ ಕೋರ್ಟುಗಳ ಜ್ಯೂರಿಸ್‌ಡಿಕ್ಷನ್ ಅಧಿಕಾರವ್ಯಾಪ್ತಿಯ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕಾದದ್ದು ಅನಿವಾರ್ಯವಾಗಿದೆ. ಏಕೆಂದರೆ ಕೋರ್ಟುಗಳಿಗಾಗಿ 50 ಮೈಲಿಗಳ ದೂರ ಹೋಗಬೇಕಾಗಿದೆ. ಮೂರು ಮೈಲಿಗಳಲ್ಲೇ ಕೋರ್ಟಿದ್ದರೂ ಕೂಡ ದೂರದಲ್ಲಿರುವ ಕೋರ್ಟಿಗೆ ಹೋಗಬೇಕಾಗಿದೆ. ಆದ್ದರಿಂದ ರೆವೆನ್ಯೂ ಸೆಟ್ಲ್‌ಮೆಂಟ್ ಆಗಬೇಕು, ಜಿಲ್ಲಾ ಪುನರ್ವಿಂಗಡಣೆ ಆಗಬೇಕು. ಹೀಗೆ ಕೋರ್ಟಿನ ಜ್ಯೂರಿಸ್ಡಿಕ್ಷನ್ ವಿಚಾರದಲ್ಲೂ ಪುನರ್ವ್ಯವಸ್ಥೆಯಾಗಿ ಕಕ್ಷಿದಾರರಿಗೆ ತೊಂದರೆಯಾಗದ ಹಾಗೆ ವ್ಯವಸ್ಥೆ ಮಾಡಬೇಕು. ಬಹುತೇಕ ಇದನ್ನು ಮಾಡಬೇಕಾದ ಆವಶ್ಯಕತೆಯಿದೆ. ಇದಕ್ಕೆ ಹೆಚ್ಚಿನ ಗಮನ ಕೊಟ್ಟು ಬೇಗ ಪುನರ್ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣರವರು ಕಟ್ಟಡದ ಅಭಾವದ ವಿಷಯ ಒತ್ತಾಯಮಾಡಿ ಹೇಳಿದ್ದಾರೆ. ಅನೇಕ ಮುನ್ಸಿಫ್ ಕೋರ್ಟುಗಳಿಗೆ ಕಟ್ಟಡದ ಅಭಾವವಿದೆ, ಕೋರ್ಟುಗಳ ಅಟ್ಮಾಸ್ಫಿಯರ್ ಸರಿಯಾಗಿಲ್ಲ. ಅದು ಸರಿಯಾಗಿದ್ದು ಒಂದು ಮಾರಲ್ ಫಿಯರ್ ಉಂಟಾಗುವ ಹಾಗೆ ತಕ್ಕ ಕಟ್ಟಡವಿದ್ದರೆ ನಿಷ್ಪಕ್ಷಪಾತವಾಗಿ ನ್ಯಾಯ ದೊರೆಯುವುದಕ್ಕೆ ಸಾಧ್ಯವೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಆದ್ದರಿಂದ ಕೋರ್ಟ್ ಹಾಲ್, ಕಟ್ಟಡ ಮತ್ತು ಒಳಅಂಗಣ ಬಹಳ ಸ್ವಚ್ಛವಾಗಿ ಎಂಥವರಿಗೂ ಮನಸ್ಸು ಪರಿವರ್ತನೆಯಾಗುವ ಹಾಗೆ, ಅಂಥ ಒಳ್ಳೆಯ ವಾತಾವರಣವಿರುವ ಹಾಗೆ ಏರ್ಪಾಡು ಮಾಡಬೇಕೆಂದೂ ಅದು ತಮ್ಮ ಕರ್ತವ್ಯವೆಂದೂ ಸೂಚಿಸುತ್ತೇನೆ.

ಮಾನ್ಯ ಮಿತ್ರರಾದ ಶ್ರೀ ದೀನದಯಾಳು ನಾಯ್ಡು ಅವರು ಬಹಳ ಜೂನಿಯರ್ಸನ್ನು ಕೋರ್ಟುಗಳಲ್ಲಿ ನೇಮಕ ಮಾಡಿದ್ದಾರೆ, ಅದರಿಂದ ಕೋರ್ಟುಗಳಲ್ಲಿ ಸರಿಯಾದ ನ್ಯಾಯ ದೊರೆಯಲು, ತೀರ್ಮಾನ ಸಿಕ್ಕಲು ಅವಕಾಶವಾಗುತ್ತಿಲ್ಲ ಎಂದು ಹೇಳಿದರು. ಬಾರ್‌ನಲ್ಲಿರುವ ಜ್ಯೂನಿಯರ್ಸ್‌ನ್ನು ಕೋರ್ಟುಗಳಲ್ಲಿ ನೇಮಿಸಿದರೆ ಅಪರಾಧಿಗಳಿಗಿರುವ ಹಕ್ಕನ್ನು ಯಾವ ರೀತಿ ಸಾಧಿಸಿ ಅವರ ರಕ್ಷಣೆ ಮಾಡಲು ಸಾಧ್ಯ? ಈ ನ್ಯೂನತೆ ಸರಿಪಡಿಸಬೇಕು.

ಮದ್ರಾಸು ಸರ್ಕಾರದವರು ಸ್ಟೇಟ್ ಬ್ರೀಫ್ಸ್‌ಗೆ 35 ರೂಪಾಯಿಗಳನ್ನು ಕೊಡುತ್ತಿದ್ದರು, ಮೈಸೂರು ಸರ್ಕಾರದವರು 18 ರೂಪಾಯಿಕೊಡುತ್ತಿದ್ದಾರೆ. ಅವರಿಗೆ ತಕ್ಕಷ್ಟು ಹಣ ಕೊಡಬೇಕು.

ಅಲ್ಲದೆ ಜ್ಯುಡಿಷಿಯಲ್ ಲಾಕಪ್‌ಗಳಲ್ಲಿ ಪೋಲೀಸಿನವರನ್ನು ಕಾವಲು ಹಾಕಿದರೆ ಅದರಿಂದ ಬಹಳ ಅನಾಹುತವಾಗುತ್ತದೆ. ಪೋಲೀಸರಿದ್ದರೆ ಕನ್‌ಫ್ಯೂಷನ್ ಆಗಿ ಹಿಂಸೆಯಾಗುತ್ತದೆ, ಇನ್ನೂ ಅನೇಕ ಅನಾಹುತವಾಗುತ್ತದೆ. ಆದ್ದರಿಂದ ಜ್ಯುಡಿಷಿಯಲ್ ಲಾಕಪ್‌ಗಳಲ್ಲಿ ಬೇರೆಯವರನ್ನು ನೇಮಕವಾಡಬೇಕು ಪೋಲೀಸರನ್ನು ದೂರ ಇಡಬೇಕು.

ಇಂಟಿಗ್ರೇಷನ್ ಆದಮೇಲೆ ಹತ್ತಿರವಿದ್ದ ಖೈದಿಗಳನು ದೂರ ಕಳುಹಿಸಿದ್ದಾರೆ. ಕೊಳ್ಳೇಗಾಲದಲ್ಲಿದ್ದ ಖೈದಿಗಳನ್ನು ಬಳ್ಳಾರಿಗೆ ಕಳುಹಿಸಿದ್ದಾರೆ, ಒಂದು ವೇಳೆ ಆ ಖೈದಿಗಳ ತಂದೆತಾಯಿಗಳೇನಾದರೂ ಸಾಯುವ ಸ್ಥಿತಿಯಲ್ಲಿದ್ದರೆ ಅವರನ್ನು ನೋಡಲು ಹೋಗುವುದಕ್ಕೂ ಸಹ ಅವಕಾಶವಿಲ್ಲದಂತಾಗಿದೆ. ಇದು, ಸರಿಯೋ? ಅಷ್ಟು ದೂರ ಕಳಿಸುವುದಕ್ಕೆ ಬದಲಾಗಿ ಹತ್ತಿರವಿರುವ ಜೈಲುಗಳಲ್ಲಿ, ಬೆಂಗಳೂರು ಮತ್ತು ಮೈಸೂರುಗಳಲ್ಲಿ ಇಟ್ಟಿದ್ದರೆ ಚೆನ್ನಾಗಿತ್ತು. ಇದಕ್ಕೆ ಗಮನ ಕೊಟ್ಟಿಲ್ಲ.

ಜೈಲುಗಳ ವಿಚಾರವನ್ನು ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಬಹಳ ಅರ್ಥಗರ್ಭಿತವಾಗಿ ಹೇಳಿದ್ದಾರೆ. ಅವರ ವಾದವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಮನುಷ್ಯ ನಾಗರಿಕನಾಗಿ ಬಾಳಬೇಕು, ಅದಕ್ಕೆ ಅವನ ಮನಸ್ಸು ಪರಿವರ್ತನೆಯಾಗಬೇಕು, ಅವನ ಜೀವನಮಟ್ಟ ಉತ್ತಮವಾಗಬೇಕು. ಇದಕ್ಕೆ ಏನು ಏರ್ಪಾಡು ಮಾಡಬೇಕೋ ಅದಕ್ಕೆತಕ್ಕ ವ್ಯವಸ್ಥೆ ಮಾಡಬೇಕೆಂದು ಒತ್ತಾಯಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಸರ್ಕಾರದಲ್ಲಿ ಮೂರು ಪಂಗಡಗಳಿವೆ. ಮೊದಲನೆಯದು ಎಗ್ಸಿಕ್ಯುಟಿವ್, ಎರಡನೆಯದು ಲೆಜಿಸ್ಲೇಚರ್ ಮತ್ತು ಮೂರನೆಯದು ಜ್ಯುಡಿಷಿಯರಿ. ಜ್ಯುಡಿಷಿಯರಿ ಅಂದರೆ, ನ್ಯಾಯಾಂಗ. ಇದರ ವಿಚಾರದಲ್ಲಿ ನಮ್ಮ ಸಮಾಜಕ್ಕೆ ಬಹಳ ಗೌರವವಿದೆ. ಏಕೆಂದರೆ ನಮ್ಮ ಹಕ್ಕು ಬಾಧ್ಯತೆ, ನಾಗರಿಕರ ಹಕ್ಕುಗಳನ್ನು ಕಾಪಾಡಿ, ಧರ್ಮಪರಿಪಾಲನೆಮಾಡುತ್ತೀರೆಂದು ಈ ವಿಚಾರದಲ್ಲಿ ಬಹಳ ಘನತೆ ಗೌರವಗಳಿವೆ. ಈ ದಿವಸ ನ್ಯಾಯಾಂಗವನ್ನು ಏರ್ಪಡಿಸಿ ನಾಗರೀಕರಿಗೆ ನ್ಯಾಯವನ್ನೊದಗಿಸಲು ತಕ್ಕ ಅವಕಾಶ ಮಾಡಬೇಕಾಗಿದೆ.

ಶ್ರೀಮಾನ್ ಮಲ್ಲಾರಾಧ್ಯರು Judiciary is supreme over Legislature ಎಂದು ಬಹಳ ಮುಖ್ಯವಾದ ಪ್ರಶ್ನೆಯನ್ನೆತ್ತಿದ್ದಾರೆ. ಅದಕ್ಕೆ ನಾನು ಭಿನ್ನಾಭಿಪ್ರಾಯವನ್ನು ಸೂಚಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಮಲ್ಲಾರಾಧ್ಯರವರು ನ್ಯಾಯಾಂಗ ಬಹಳ ಪ್ರಮುಖ್ಯವಾದುದು ಎಂದು ಹೇಳಿದ್ದಾರೆ. ಆದರೆ ಅದಕ್ಕೆ ನನ್ನದು ಭಿನ್ನಮತವಿದೆ. ಏಕೆಂದರೆ ನಮ್ಮ ದೇಶದಲ್ಲಿ ರಾಜ್ಯಾಂಗವು ಬಹಳ ಪ್ರಮುಖವಾದುದು ಮತ್ತು ಶ್ರೇಷ್ಠವಾದುದು. ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳ ರಾಜ್ಯಾಂಗಗಳ ಬಗ್ಗೆ ಅವರು ಹೇಳಿದರು. ಆದರೆ ನಮ್ಮ ದೇಶದ ರಾಂಜ್ಯಾಂಗ ಬೇರೆ ರೀತಿಯದಾಗಿದೆ. ನಮ್ಮ ದೇಶದಲ್ಲಿ ರಾಜ್ಯಾಂಗವು ನಮಗೆ ಶ್ರೇಷ್ಠವಾದದ್ದು. ಕಾನೂನಿನ ವಿಚಾರದಲ್ಲಿ ನ್ಯಾಯಾಂಗಕ್ಕೆ ಸರಿಪಡಿಸಲು ಹಕ್ಕು ಇದೆ. ಆದರೆ ಲೇಜಿಸ್ಲೇಚರ್‌ಗಿಂತಲೂ ನ್ಯಾಯಾಂಗ ಪ್ರಧಾನವಾಗಿರಬೇಕೆಂದು ಹೇಳುವ ವಾದವನ್ನು ನಾನು ಒಪ್ಪುವುದಿಲ್ಲ.

Sri J. B. MALLARADHYA.—By way of personal explanation, Sir, in saying that we have followed the American type of Constitution, I mentioned that in England, Parliament was supreme. There is no question of constitutional law in England. We have adopted some provisions of the American Constitution by which if there is a legislative Act which is repugnant to the provisions of the Constitution, in the State the High Court and in the Union, the Supreme Court, can interfere. They have the power to nullify

(SRI J. B. MALLARADHYA)

or modify any provisions or any Act of the Legislation which is repugnant to the Constitution.

(*Interruption.*)

That is the reason why they have made so many amendments to the Constitution in India. In view of this, they have even the powers to veto any legislative Act. In the Indian Constitution, the Judiciary occupies a supreme position which is notably absent from the British Constitution. When once a law is enacted in the British Parliament, the Courts can do nothing. When the Parliament takes a decision, the Judiciary can do nothing. It is in that sense that I made a comparison between the American type of Constitution and the British Parliamentary Constitution. In view of that the Judiciary today in India is supreme in the sense that it can veto any legislative Act.

Sri G. VENKATAI GOWDA.—Provided it is challenged.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಶ್ರೀಮಾನ್ ಮಲ್ಲಾರಾಧ್ಯರವರು ಹೇಳಿರತಕ್ಕಂಥ ವಿಚಾರದಲ್ಲಿ ನಾನು ದೀರ್ಘವಾಗಿ ಆಳವಾಗಿ ಯೋಚನೆ ಮಾಡಿದ್ದೇನೆ. ಆದರೆ ಅವರು ಹೇಳುವುದರಲ್ಲಿ ನನಗೆ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಅವರು ನ್ಯಾಯಾಂಗವೇ ಪ್ರಧಾನವಾದುದೆಂದು ಹೇಳುತ್ತಾರೆ. ಆದರೆ ನಾನು ಆ ರೀತಿಯಾಗಿ ಹೇಳುವುದಿಲ್ಲ. ನಾವು ಏನಾದರೂ ತಪ್ಪು ಮಾಡುತ್ತಿದ್ದರೆ ಆ ತಪ್ಪನ್ನು ತಿದ್ದಲು ನ್ಯಾಯಾಂಗವಿದೆಯೇ ಹೊರತು, ಯಾವ ರೀತಿಯಿಂದಲೂ ನ್ಯಾಯಾಂಗವೇ ಪ್ರಧಾನವಾದುದಲ್ಲ.

ಇನ್ನು ನ್ಯಾಯಾಂಗದಲ್ಲಿ (1) ಪ್ರೆಸ್, (2) ಬೆಂಚ್ ಮತ್ತು (3) ಬಾರ್, ಇವು ನಮ್ಮ ದೇಶದಲ್ಲಿ ಪ್ರಜಾಸತ್ತಾತ್ಮಕ ರಾಜ್ಯವು ಜಾರಿಗೆಬಂದಮೇಲೆ ದಕ್ಷತೆಯಿಂದ ನಡೆಯಬೇಕಾದುದು ಮುಖ್ಯ. ಮೂರನೆಯದಾದ ಬಾರ್ ವಿಷಯದಲ್ಲಿ ಹೇಳುವುದಾದರೆ ಅವುಗಳಿಗೆ ಸರಿಯಾದ ಕಟ್ಟಡಗಳ ಅಭಾವವಿದೆ. ಕಟ್ಟಡಗಳ ವಿಷಯದಲ್ಲಿ, ಹೇಳುವುದಾದರೆ, ಸರಕಾರದವರು ಅನುಕೂಲತೆಯನ್ನು ಅಷ್ಟಾಗಿ ಒದಗಿಸಿಲ್ಲ. ಪ್ರಜಾಸತ್ತಾತ್ಮಕ ನೀತಿಯನ್ನು ಸರಿಯಾಗಿ ಜಾರಿಗೆ ತರತಕ್ಕ ಕರ್ತವ್ಯ ಈ Barನದಾಗಿದೆ. ಆದುದರಿಂದ ಇದಕ್ಕೆ ಹೆಚ್ಚಿನ ಸ್ಥಾನಾನುಕೂಲಗಳನ್ನು ಒದಗಿಸಿ ಕೊಡಬೇಕಾದುದು ಅವಶ್ಯವಾಗಿದೆ. ಬೆಂಗಳೂರ್ ಬಾರ್ ಬಗ್ಗೆ ಬೇಕಾದಷ್ಟು ಸಾರಿ ಸರಕಾರಕ್ಕೆ ನಾವು ಮನವಿ ಮಾಡಿಕೊಂಡಿದ್ದೇವೆ. ಅದಕ್ಕೆ ಒಂದು ಉತ್ತಮ ಕಟ್ಟಡವಿಲ್ಲ. ಪುಸ್ತಕಗಳನ್ನು ಕೊಂಡುಕೊಳ್ಳಲು ಹಣವಿಲ್ಲ. ಒಳ್ಳೆಯ ಲೈಬ್ರರಿಯಿಲ್ಲ. ಕರ್ನಾಟಕದಲ್ಲಿಯೇ ಬೆಂಗಳೂರು ಬಾರ್ ಬಹಳ ಪ್ರಾಮುಖ್ಯವುಳ್ಳುದು. ಲೈಬ್ರರಿ ಲಾಯರುಗಳಿಗೆ ಅನುಕೂಲವಾಗಿಲ್ಲ. ಕಾನೂನನ್ನು ಸರಿಯಾಗಿ ಅರ್ಥ ಮಾಡಿಕೊಂಡು ಜಾರಿಗೆ ತರುವುದರಲ್ಲಿ ಲಾಯರುಗಳಿರುವುದು ಅವಶ್ಯಕ. ನಾಗರಿಕರ ಹಕ್ಕು ಬಾಧ್ಯತೆಗಳನ್ನು ರಕ್ಷಣೆ ಮಾಡುವ ಕೆಲಸದಲ್ಲಿ ಲಾಯರುಗಳ ಆವಶ್ಯಕತೆಯಿದೆ. ಆದ್ದರಿಂದ ಬೆಂಗಳೂರು ಬಾರ್‌ಗೆ ಅನುಕೂಲತೆಗಳನ್ನೊದಗಿಸಿಕೊಡಲು ಅದರ ಕಡೆಗೆ ಹೆಚ್ಚು ಗಮನಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೆಂಗಳೂರಿನ ಮುನ್‌ಸಿಫ್ ಕೋರ್ಟಿನಲ್ಲಿ ಒಬ್ಬರೇ ನ್ಯಾಯಾಧೀಶರು ಇರುವುದರಿಂದ ಕೆಲಸ ಹೆಚ್ಚಾಗಿ ಬಹಳ ಕೇಸಿಸ್ ಪೆಂಡಿಂಗ್ ಇವೆ. ಎರಡು ಮೂರು ವರ್ಷಗಳ ಪೆಂಡಿಂಗ್ ಕೇಸಸ್ ಇವೆ. ಈ ರೀತಿ ನ್ಯಾಯ ದೊರಕಲು ಬಹಳ ಕಾಲವಿಳಂಬವಾಗುತ್ತಾ ಇದೆ. Delayed justice is denied justice ಎಂಬಂತಾಗಿದೆ. ಆದುದರಿಂದ ಇತ್ತಕಡೆಗೆ ಸರಕಾರವು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆದಷ್ಟು ತೀವ್ರವಾಗಿ ವ್ಯಾಜ್ಯಗಳು ತೀರ್ಮಾನವಾಗಿ ನ್ಯಾಯ ದೊರಕುವಂತಾಗಬೇಕು.

ಇನ್ನು ನ್ಯಾಯಾಂಗ ಶಾಖೆಯಲ್ಲಿ ನಡೆಯತಕ್ಕ ರಿಕ್ರೂಟ್‌ಮೆಂಟಿನ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಈ ವಿಚಾರದಲ್ಲಿ ಮದ್ರಾಸ್ ರಾಜ್ಯದವರು ಬಹಳ ಮುಂದೆ ಬಂದಿದ್ದಾರೆ. ಒಳ್ಳೆಯ ಪಾಠವನ್ನು ಮದ್ರಾಸಿನಿಂದ ಕಲಿಯುವಂತಾಗಿದೆ. ಹಿಂದುಳಿದ ವರ್ಗದವರ ಹಿತಸಾಧನೆಯ ವಿಚಾರದಲ್ಲಿಯೂ ಅವರು ಪ್ರಗತಿಮಾರ್ಗದಲ್ಲಿ ಹೋಗುತ್ತಿದ್ದಾರೆ. ಬ್ಯಾಕ್‌ವರ್ಡ್ ಕ್ಲಾಸಿನವರಿಗೆ ಉತ್ತೇಜನ ಕೊಡಬೇಕೆಂದು ನಮ್ಮ ಕಾನ್‌ಸ್ಟಿಟ್ಯೂಷನ್ನಿನಲ್ಲಿ ಇದೆ. ಆರ್ಟಿಕಲ್ 309ರಲ್ಲಿ ಒಂದು ಪ್ರೊವಿಜನ್ ಇದ್ದರೂ ಮನಸ್ಸಿಗೆ ಬಂದಹಾಗೆ ರಿಕ್ರೂಟ್‌ಮೆಂಟ್ ಮಾಡುತ್ತಿದ್ದಾರೆ. ಇದನ್ನು ಈ ಸಭೆಯ ಅವಗಾಹನೆಗೆ ತಂದಿದ್ದೇನೆ. ಹಿಂದುಳಿದ ವರ್ಗದವರಿಗೆ ಅನ್ಯಾಯವಾಗುತ್ತಾ ಇದೆ. ಆದ್ದರಿಂದ ಇದಕ್ಕೆ ಗಮನ ಕೊಡಬೇಕೆಂದು ಸೂಚಿಸುತ್ತೇನೆ. ರಿಕ್ರೂಟ್‌ಮೆಂಟಿನ ವಿಚಾರದಲ್ಲಿ ಹೈಕೋರ್ಟ್ ಸರಿಯಾದ ಕ್ರಮ ತೆಗೆದುಕೊಳ್ಳುತ್ತಿದೆಯೇ ಎಂದು ನಾನು ಕೇಳಿದ ಒಂದು ಪ್ರಶ್ನೆಗೆ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇನ್ನು ಮುಂದೆ ಸರಿಯಾದ ರೀತಿಯಲ್ಲಿ ಜಾರಿಗೆ ಬರುತ್ತದೆ ಎಂಬುದು ಸಂತೋಷಕರ. ಆದರೆ ಸದ್ಯಕ್ಕಿರುವ ರೆಜಿಸ್ಟ್ರಾರರು ಜಾತೀಯವಾದದ ಮೇಲೆ ನೇಮಕ ಮಾಡುತ್ತಿರುವಂತಿದೆ ಎಂದು ಬಹಳ ದುಃಖದಿಂದ ಹೇಳುತ್ತೇನೆ. ವೇಕೆನ್ಸಿ ಆದಕೂಡಲೇ ತಮ್ಮ ಜನರನ್ನೇ ಅವರು ನೇಮಕ ಮಾಡುತ್ತಿದ್ದಾರೆಂಬುದು ಗಮನಕ್ಕೆ ಬಂದಿದೆ.. ಕೆಳದರ್ಜೆಯ ನೌಕರರಿಗೆ ಪ್ರೊಮೋಷನ್ ಕೊಡುವಾಗ ಕೂಡ ಈ ವಿಚಾರದಲ್ಲಿ ಅವರು ಒಂದು ಹೆಜ್ಜೆ ಮುಂದೆ ಹೋಗಿ ಕೆಲಸಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಅಧಿಕಾರಿಗಳಲ್ಲಿ ಇಂಥ ಜಾತೀಯವಾದವನ್ನು ಇಟ್ಟುಕೊಂಡಿರತಕ್ಕಂಥಾದ್ದು ಸರಿಯಲ್ಲ. ಇಷ್ಟು ಮಾತ್ರ ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟದಕ್ಕೆ ಅಧ್ಯಕ್ಷರನ್ನು ಅಭಿನಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಸವನಗೌಡ (ಲಿಂಗಸುಗೂರ್).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳಿಗೆ ನಾನು ಬೆಂಬಲವನ್ನು ಕೊಡುತ್ತಾ ಮೂರು-ನಾಲ್ಕು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಹೈದರಾಬಾದ್ ರಾಜ್ಯದಲ್ಲಿರತಕ್ಕ ಭಾಷಾ ಸಮಸ್ಯೆಯನ್ನು ಈಗ ಬಗೆಹರಿಸಬೇಕಾಗಿದೆ. ಕೋರ್ಟುಗಳಲ್ಲಿರತಕ್ಕ ಭಾಷೆ ಇಂಗ್ಲಿಷ್ ಆಗಿದೆ. ಕೋರ್ಟುಗಳಲ್ಲಿರುವ ಮುನ್‌ಸೀಫ್ ಜಡ್ಜ್ ಅವರುಗಳು ಉರ್ದು ಬಲ್ಲವರು. ಅವರಿಗೆ ಇಂಗ್ಲಿಷ್ ಭಾಷಾಂತರ

ದವರು ಬೇಕಾಗಿದೆ. ಈಗ ಇಂಗ್ಲಿಷ್ ಭಾಷೆಯನ್ನು ಉರ್ದು ಭಾಷೆಗೆ ಭಾಷಾಂತರ ಮಾಡುವವರು ಇದ್ದಾರೆ. ಸಾಕ್ಷಿದಾರ ಕನ್ನಡ ಭಾಷೆಯಲ್ಲಿ ಹೇಳಿದಲ್ಲಿ ಅದನ್ನು ಚಪರಾಶಿಯಿಂದ ಉರ್ದುವಿನಲ್ಲಿ ತಿಳಿದುಕೊಂಡು ಇಂಗ್ಲೀಷಿಗೆ ಭಾಷಾಂತರ ಮಾಡಿ ಬರೆದುಕೊಳ್ಳುತ್ತಾರೆ. ಇದು ಬಹಳ ಅನ್ಯಾಯದ ಪ್ರಸಂಗವಾಗಿದೆ. ವಾದಿ ಮತ್ತು ಪ್ರತಿವಾದಿ ಲಾಯರುಗಳಿಗೆ ಇದರಿಂದ ಬಹಳ ತೊಂದರೆಯಾಗಿದೆ. ಬಡವರಿಗಂತೂ ಬಹಳ ಅನ್ಯಾಯವಾಗುತ್ತಿದೆ. ಕನ್ನಡದಲ್ಲಿಯೂ ಅಲ್ಲಿನ ಪ್ರೊಸೀಡಿಂಗ್ಸನ್ನು ರಿಕಾರ್ಡ್ ಮಾಡಿಕೊಳ್ಳುವುದಕ್ಕೆ ಸಿಬ್ಬಂದಿಯನ್ನು ಇಟ್ಟಿರುತ್ತಾರೆ. ಮ್ಯಾಜಿಸ್ಟ್ರೇಟರ ಉರ್ದುಭಾಷೆ ಜನಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಕನ್ನಡದಲ್ಲಿ ಅವರ ಭಾಷೆಯನ್ನು ಭಾಷಾಂತರ ಮಾಡುವವರನ್ನು ಜಾಗ್ರತೆಯಾಗಿ ನೇಮಿಸಬೇಕು; ಮತ್ತು ಕನ್ನಡ ಭಾಷೆಯನ್ನು ಬಲ್ಲಂಥ ಮ್ಯಾಜಿಸ್ಟ್ರೇಟರನ್ನು ಅಲ್ಲಿಗೆ ನೇಮಿಸಬೇಕು. ಯಾರಾದರೂ ಒಂದು ಅರ್ಜಿಯನ್ನು ಕನ್ನಡದಲ್ಲಿ ಬರೆದುಕೊಟ್ಟರೆ, ಅದನ್ನು ಇಂಗ್ಲಿಷ್‌ನಲ್ಲಿ ಭಾಷಾಂತರ ಮಾಡಬೇಕಾಗಿದೆ. ನಮ್ಮಲ್ಲಿ ಅಂತಹವರು ಸಿಕ್ಕುವುದು ಕಷ್ಟ. ಆ ರೀತಿ ಇಂಗ್ಲಿಷ್‌ನಲ್ಲಿ ಕನ್ನಡದಲ್ಲಿ ಬರೆದಿರುವ ಅರ್ಜಿಗಳನ್ನು ಭಾಷಾಂತರಗೊಳಿಸಲು ಫೀಸ್ ಕೊಡಬೇಕು. ಅದಕ್ಕಾಗಿ ಎಷ್ಟೋ ಜನರು ನಿರಾಶೆಪಟ್ಟುಕೊಂಡು ಹಿಂದಕ್ಕೆ ಹೋಗುತ್ತಾರೆ. ಕೋರ್ಟು ವ್ಯವಹಾರದಲ್ಲಿ ಭಾಗವಹಿಸುವುದೇ ಇಲ್ಲ. ಆದ್ದರಿಂದ ಅಂತಹ ಕೋರ್ಟುಗಳಲ್ಲಿ ಭಾಷಾಂತರ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ನನ್ನ ಬೇಡಿಕೆ.

ಇನ್ನು ಹೈಕೋರ್ಟಿನಲ್ಲಿ ಉರ್ದು ಬಲ್ಲ ಜಡ್ಜರನ್ನು ಹಾಕಿಲ್ಲ. ಆದ್ದರಿಂದ ಜಾಗ್ರತೆಯಾಗಿ ಇನ್ನೊಬ್ಬ ಜಡ್ಜ್ ಅವರನ್ನು ಅಲ್ಲಿಗೆ ಹಾಕಬೇಕು. ಅದಕ್ಕಾಗಿ ಸುಮಾರು ಎಂಟು-ಹತ್ತು ವರ್ಷಗಳಿಂದ ನೂರಾರು ಫೈಲುಗಳು ಹಾಗೆಯೇ ಉಳಿದಿವೆ. ಈ ವಿಚಾರವಾಗಿ ಮನವಿಗಳನ್ನು ಮಾಡುತ್ತಿದ್ದೇವೆ. ಈ ವಿಷಯವನ್ನು ಇನ್ನೊಂದು ವರ್ಷದೊಳಗಾಗಿ ಇತ್ಯರ್ಥ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನೊಂದು ವಿಷಯ. ಕೋರ್ಟುಗಳಲ್ಲಿರುವ ಪ್ರೋಸೆಸ್ ಸರ್ವರುಗಳಿಗೆ ಡಿಯರ್‌ನೆಸ್ ಅಲೋಯನ್ಸನ್ನು ಕೊಡುತ್ತಲೇ ಇಲ್ಲ. ಆದರಲ್ಲೂ ರಾಯಚೂರ್ ಭಾಗದಲ್ಲಿರುವ ಕೋರ್ಟುಗಳ ಪ್ರೋಸೆಸ್ ಸರ್ವರುಗಳಿಗೆ ಡಿ. ಎ. ಕೊಡುತ್ತಿಲ್ಲವೆಂದು ಹೈಕೋರ್ಟಿಗೆ ವರದಿ ಮಾಡಿ ಎರಡು ತಿಂಗಳುಗಳಾದರೂ ಇನ್ನೂ ಉತ್ತರ ಸಿಕ್ಕಲಿಲ್ಲ. ಪ್ರೋಸೆಸ್ ಸರ್ವರುಗಳು ಬಹಳ ಬಡವರು. ಅವರೆಲ್ಲಾ ರಾತ್ರಿ ಹಗಲೂ ದುಡಿಯುತ್ತಿದ್ದಾರೆ. ಅವರು, ಸಂಸಾರವನ್ನು ಯಾವ ರೀತಿ ಕಾಪಾಡಬೇಕು ? ಅವರ ಮನವಿಗಳನ್ನು ಪರ್ಯಾಲೋಚಿಸಿ, ಜಾಗ್ರತೆಯಾಗಿ ಅವರಿಗೆ ಇತರರಿಗೆ ಕೊಟ್ಟ ಹಾಗೆ ಡಿ. ಎ.ಯನ್ನು ಸರ್ಕಾರದ ಕಾನೂನು ಪ್ರಕಾರ ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು).—ನಮ್ಮ ಜಿಲ್ಲೆಗೆ ಒಬ್ಬ ಜಿಲ್ಲಾಧಿಕಾರಿಯನ್ನು ನೇಮಕಮಾಡಿದ್ದಾರೆ, ಅವರಿಗೆ ಕನ್ನಡವೇ ಬರುವುದಿಲ್ಲ, ಸ್ವಾಮಿ.

ಅಧ್ಯಕ್ಷರು.—ತಮಗೆ ಕಾಲಾವಕಾಶ ಕೊಟ್ಟಾಗ ಆ ವಿಷಯವನ್ನು ಮಾತನಾಡಬಹುದು.

*Sri C. M. ARUMUGHAM (Kolar Gold Fields).—Before I begin to speak on the Demands, I would like to say at the very outset that we cannot get justice from the Home Ministry in the matter of administration of jails. This is because, it is the Home Ministry which charge-sheets and commits the prisoners to jail. I would therefore suggest that the administration of justice should be vested with the Law Minister and convict settlements with my friend Sri Chennigaramiah, because he is in charge of social welfare. They would not bring to bear the 'police mentality' in the administration of justice. They would not allow even the police people to get into the jails. Today a police officer could do so with the permission of the Home Minister. So also any police officer can walk into the court and try to influence the Prosecuting Inspector, because he can easily obtain the permission of the Home Minister.

Sir, I am aware of the conditions of some of the jails, particularly in Kolar District. I had been in one of the jails for seventeen days and have personal experience. Next, I visited the jail at Alipore, this time in a different capacity—as a visitor. Sir, I would not hesitate to pay a compliment and I should say that this is one of the best managed jails in the State. It has a wall-less compound and has undergone a good deal of reforms. I would very well advise the Home and Law Ministers and the Minister for Convict Settlement to visit the Alipore Jail and find out why the conditions there could not be applied to the other jails, particularly the Central Jail, at Bangalore. Sir, I must say that the Central Jail is the worst-managed and ill-kept jail I have ever seen. In this connection I would like to read a portion of the Jail Reforms Committee's report :

> "Apart from this, it is distinctly undesirable to continue to have the chief prison of the State in the heart of the city and in close proximity to courts, offices and educational institutions. This is bound to have an unhealthy psychological influence on the mind of the public, especially the younger generation. A little commotion inside the jail is bound to

(SRI C. M. ARUMUGHAM)

attract curiosity from outside] and lead to excitement".

Sir, the conditions inside this jail are appalling. The prisoners were wearing dirty clothes, when I had been there. I do not know how many among them were attacked with 'Flu.' Sir, it has been stated that the Inspector General of Prisons had studied this problem in America and Madras. I am told he is a qualified person on this subject and I do not know why he cannot introduce reforms in the Central Jail on the same model as the Alipore Jail. In Madras every person is given opportunity to earn his wages. Here he is given four annas. In Madras the prisoners are used by the Public Works Department for construction of roads, bridges and in the several projects. But here, I learn that during Sri. Hanumanthaiah's term, they were used in the construction of Vidhana Soudha.

Sri J. B. MALLARADHYA.—It should not be done.

Sri C. M. ARUMUGHAM.—They will have to be given a living wage, I differ from my friend Sri Mallaradhya. The prisoners should not be confined to the four walls of the jails. When I say that the prisoners should work and earn a full wage, I do not mean to say that the Government should profit by their work and that they should earn revenues. The idea is to teach them a good life, to make them love honest work and to make them better citizens. It does not matter, how much money the Government spends on them. Today it is 34 lakhs. I would like them to spend another 34 lakhs, because they are going to root out criminality in vast number of men.

Sir, the education given to the prisoners is scanty, just for three hours. I would suggest that, with the help of the Director of Public Instruction, you should be able to make the teachers go to the jail and impart really good education to the inmates. You should be able to take them up to the high school standards and if some of the prisoners deserve you should be able to give them scholarships and see that they continue higher education, even after they leave the prison. So far as education is concerned, it needs some consideration at the hands of the Government. They must appoint whole-time teachers and not part-time teachers for two or three hours.

I think there need not be a Superintendent for the Jails. Let the I.G.P. who is in charge of the Central Jail do all the reform work. Our jails should be a model for others to follow.

Lastly, I want to say a word about the Administration of Justice. So far as my constituency is concerned, there is a court but it is located in a Travellers' Bungalow. Half the portion is occupied by the court and the other half, by the Travellers' Bungalow. If any officer comes to the Travellers' Bungalow, he does not know how to reside there because the court premises are full of illicit liquor. Within 3 months' time, the police have detected 2,000 cases. It is a compliment to the Home Minister. The fine for the offenders ranges from Rs. 5 to Rs. 100. The K.G.F. needs a proper building for the court and it should not be located in the Travellers' Bungalow.

Regarding appointments, I am told that in England the politicians are debarred from appointing Judges. The politicians, that means, the Ministers should not appoint or recommend the appointment of Judges because they will influence them. If the Constitution comes in the way, by all means amend it because after all the Constitution is nothing but what is copied from the French, English and American Constitutions. In England, the politicians do not appoint them and the Judges are the supreme authority. You cannot remove them. I was told that in 1948 the Government there removed a Judge. If that is true, it is wrong. The Government should not be given the power to remove a Judge or even recommend the removal of a Judge. I am also told that a son-in-law of a Minister has been appointed as a Public Prosecutor in Mandya. That should not be done.

Sri B. D. JATTI (Jamkhandi).—Even if he is duly qualified ?

Sri C. M. ARUMUGHAM.—When there are seniors, why should a raw man

coming from some other place be appointed as Public Prosecutor in Mandya? You can appoint your own son-in-law or father-in-law in the Police Department but not in such posts which come under the Administration of Justice.

With these few remarks, I thank the Chair for having given me this opportunity to speak.

Sri B. R. SUNTHANKAR (Belgaum City).—Mr. Speaker, Sir, I wish to make a few suggestions regarding the Jails, Remand Homes and the After-Care Associations in the State. Before that, I would like to voice a grievance similar to that voiced a little while ago by my Hon'ble friend from Hyderabad about the question of language. From the very beginning, the Belgaum District is considered as a bilingual district where Kannada and Marathi are official languages. For all practical purposes only Kannada is being used in the court. The charge-sheets given to the Marathi-speaking accused are invariably in Kannada. Similarly, the statements, etc., that are taken down in the courts are all invariably in Kannada. This causes a great inconvenience to the Marathi people there. I would like the Government and particularly the Law Minister to look into this state of affairs and safeguard properly the interests of the Marathi people there.

Coming to Remand Homes, I would like to suggest to the Government and particularly to the Minister in charge that they should be more vigilant in respect of Remand Homes. They should exercise strict supervision, check and control over the Remand Homes and the After-Care Associations in the State. The Remand Homes are run with the object of improving and reforming the juvenile boys and girls and so if they are not properly conducted the effect is likely to be the reverse. The experience of the Remand Home in the Bombay Area, I regret to say, is not very happy. I wish to draw the particular attention of the Government to the Remand Home that is run at Belgaum by the After-Care Association. The affairs of the Remand Home there are mismanaged. There are a number of irregularities committed in the Office of the Remand Home. There is lack of co-operation between the Secretary and the staff of the After-Care Association. We have been receiving complaints particularly from the clerical staff that they are being harassed by the Secretary on flimsy pretexts. The officers do not discharge their duties properly. The former officer in charge of the Probation of the Offenders Act was a relation of the Honorary Secretary of the After-Care Association. He used to attend office rarely and when he attended, it was for two or three hours in a week. That was the way in which he was working. Fortunately, he has been recently transferred. The members of the Managing Committee are bound to take undue advantage of the Remand Home. There are about 81 boys and girls in the Remand Home there. Seventeen out of them are girls. Some of them are grown-up girls. During the last Ganapathi Festival a very nasty incident took place. One of the sons of a Managing Committee member took a girl aged 17 from the Remand Home to his house at 7-30 in the evening without the permission of the Lady Probation Officer with her absence and brought her back at 12-30 midnight. The Lady Probation Officer after coming to know about this, filed a complaint immediately at 2 P.M. in the night to the police station, but unfortunately that complaint was summarily disposed of.

Similarly, Sir, there is a lot of wastage and misuse of funds. Sir, the Remand Home gets a grant of Rs. 30,000 annually, but that amount is not properly utilised. That Remand Home has rented a Bungalow No. 11 in the Belgaum Fort Road. That bungalow is lying vacant for the last several years. The rent fixed is Rs. 100 per month I do not understand why there should be so much waste of public funds! I would request the Hon'ble Minister to look personally into this affair.

I am finishing, Sir. Some of the officers of the Remand Home are in the habit of drawing T.A. and D.A. unauthorisedly in contravention of the

(SRI B. R. SUNTHANKAR)

Rules. I am prepared to submit a list of such T.A., D.A. received by one or two officers. I would again request the Hon'ble Minister to investigate into the affair. In the former Bombay State, there used to be annual inspection and audit of accounts of such associations. Since the inauguration of this new State, there has been neither any inspection nor auditing of the accounts of this Association. This is rather surprising. I would request the Hon'ble Minister to personally look into the affairs of this Remand Home and After-Care Association, and investigate all such matters

I have done Sir.

*Sri B. G. KHOT (Sadalga).—Sir, I am not a lawyer. I have a little working knowledge of laws. But still I desire to place before the Treasury Benches my own experience of what I am undergoing these years. Litigation has attained its topmost in the rural areas. I insist on the Treasury Benches trying to minimise litigation. How to minimise this litigation is the question. For minimising it there are two ways, according to me. One is to take serious steps against the village touts, the so-called pleaders. That arrangement is as necessary as anything. I hold the Treasury Benches responsible for the other thing--I request them not to make statutes concerning our own social life.

Mr. SPEAKER.—Not only the Treasury Benches, I hold the Law Minister responsible in particular! (*Laughter*).

Sri B. G. KHOT.—I hold the entire Council of Ministers responsible, because they are making statutes after statutes calculated to interfere with the settled social life of the people. This is injurious to the interests of our rural life. By this the Government are setting up class against class. Take for instance, the Tenancy Act, Rent Act the Debt Reconciliation Act, etc. All these things which we are enacting, will have the effect of interfering with domestic peaceful life in our villages. Therefore I request the Government that they should not hasten to make such statutes that will not only put a strain on social life, but also upset it. They must study the effects fully before they try to make statutes.

The other request is, minorities should not in any case be neglected in the matter of appointments, etc. They should be given more than adequate representation in the services. Of course, it must no doubt be based on merits only. I hope and trust that the Government will do this.

*Sri BALWANT RAO (Bhalki).—Mr. Speaker, Sir, I want to suggest only two or three points. The first point is regarding appointment of Urdu-knowing Judges in the State High Court. For a long time, after the Reorganisation, only one Urdu-knowing Judge was appointed after one year. Owing to this, Urdu files accumulated in the High Court and there was inordinate delay for a long time and no single civil case was disposed of. Only five or six cases were disposed of. There is again an accumulation of cases in the High Court. I understand that one single Urdu-knowing Judge is not found to be enough. Therefore I suggest that at least one more Urdu-knowing judge be appointed to our High Court.

The next point is, sometimes, we see that magistrates and judges of mofussil courts are transferred to distant places. For exampsle, the Magistrate in Bidar District is transferred to Bangalore District Magistrates coming from the Hyderbad district know English and Urdu and if such Magistrates are transferred to places where Kannada and English are prevalent, how can we expect judges and magistrates who do not know the regional languages to dispose of cases satisfactorily and expeditiously? The magistrate from Mangalore District does not know Urdu. How can he dispose of cases where records are built up in Urdu? Therefore my suggestion is that such transfers may not be made or they may be stopped as early as possible.

The third point is: Sri Sunthankar has already referred to Marathi. Bidar District also is a bilingual area and there are no facilities for Marathi

speaking people in that area. I therefore suggest and support my Hon'ble friend in saying that Marathi be deemed as official language in courts also.

The next point is, there is no Remand Home in Bhalki and every time the accused persons are brought from jail and sent back. I therefore suggest that one Remand Home be established in Bidar District at Bhalki.

*ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಪತಿಗಳೇ, ನಾನು ಇವತ್ತಿನ ದಿವಸ ಡಿಮ್ಯಾಂಡ್ ನಂಬರ್ 16. ಜೈಲು ಆಡಳಿತದ ಬಗ್ಗೆ ಇಲ್ಲಿ ನಡೆದಂತಹ ಚರ್ಚೆಗೆ ಉತ್ತರಕೊಡಲು ನಿಂತಿದ್ದೇನೆ. ನನ್ನ ತರುವಾಯ ನನ್ನ ಉಳಿದ ಮಾನ್ಯಮಿತ್ರರು ಇತರ ಚರ್ಚೆಗಳಿಗೆ ಉತ್ತರಕೊಡುತ್ತಾರೆ. ಜೈಲು ಆಡಳಿತದ ಬಗ್ಗೆ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡುತ್ತಾ ಅನೇಕ ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಸಲಹೆಗಳನ್ನು ಎಷ್ಟರಮಟ್ಟಿಗೆ ಜಾರಿಗೆ ತರಬಹುದು ಎನ್ನುವುದರ ಬಗ್ಗೆ ನಾನು ಗಂಭೀರವಾಗಿ ವಿಚಾರಮಾಡಿದೆ. ಕೆಲವು ಮಾನ್ಯ ಸದಸ್ಯರು ಯಾವುದೂ ವಿಧಾಯಕವಾದ ಸಲಹೆಗಳನ್ನು ಕೊಡದೇ ಜೈಲು ಆಡಳಿತ ಸರಿಯಾಗಿ ನಡೆಯುತ್ತಿಲ್ಲ, ಬ್ರಿಟಿಷರು ಹಾಕಿಕೊಟ್ಟಂಥ ಒಂದು ಪದ್ಧತಿಯಲ್ಲೇ ಇವತ್ತಿನ ದಿವಸವೂ ಆಡಳಿತ ನಡೆಯುತ್ತಾ ಇದೆ, ಇದರಲ್ಲಿ ಯಾವತರಹದ ಸುಧಾರಣೆಯೂ ಆಗಿಲ್ಲ ಎಂದು ಒಂದು ರೀತಿ ಆರೋಪಣೆ ಮಾಡಿದರೇ ಹೊರತು ವಿಧಾಯಕವಾಗಿ ಯಾವತರಹದ ಸಲಹೆಯನ್ನೂ ಕೊಟ್ಟಿಲ್ಲ.

ಆದರೂಕೂಡ ಜೈಲಿನ ಆಡಳಿತದಲ್ಲಿ ಸುಧಾರಣೆಯಾಗತಕ್ಕ ಬಗ್ಗೆ ಮತ್ತು ಜೈಲಿನಲ್ಲಿರತಕ್ಕವರ ರಕ್ಷಣೆಯ ಬಗ್ಗೆ ಹಾಗೂ ಜೈಲಿಗೆ ಬರತಕ್ಕ ಜನಗಳಿಗೆ ಅವರು ಜೈಲಿನಲ್ಲಿರುವ ಒಂದು ಅವಧಿಯಲ್ಲಿ ಅವರ ಮಾನಸಿಕ ಪರಿವರ್ತನೆಯಾಗಿ, ಅವರು ಜೈಲಿಂದ ಹೊರಗೆ ಬಂದ ಅನಂತರ ಇವರೂ ಕೂಡ ಯೋಗ್ಯ ನಾಗರಿಕರಾಗಿ ಸಮಾಜದಲ್ಲಿ ಒಂದು ಮರ್ಯಾದೆ ಗಳಿಸುವಂಥ ರೀತಿಯಲ್ಲಿ ಸುಖವಾಗಿ ತಮ್ಮ ಜೀವನೋಪಾಯ ನಡೆಸಿಕೊಂಡು ಹೋಗಲು ಅವಕಾಶಗಳಿರಬೇಕೆಂಬ ಉದ್ದೇಶದಿಂದ ಅವರೆಲ್ಲರೂ ಟೀಕೆ ಮಾಡಿದ್ದಾರೆಂದು ತಿಳಿದುಕೊಂಡು ಈ ಜೈಲಿನ ಆಡಳಿತದ ಬಗ್ಗೆ ನಡೆದಂಥ ಚರ್ಚೆಯಲ್ಲಿ ಭಾಗವಹಿಸಿದ್ದಂಥವರಿಗೆಲ್ಲ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನರ್ಪಿಸುತ್ತೇನೆ.

ಇನ್ನು ಜೈಲಿನ ಆಡಳಿತದ ಬಗ್ಗೆ ಸರ್ಕಾರದವರ ಧೋರಣೆ ಅಥವಾ ಅವರ ಒಂದು ಪಾಲಸಿ ಏನಿದೆ ಎಂಬುದರ ಬಗ್ಗೆ ಈ ವರೆಗೂ ಮಾನ್ಯ ಸದಸ್ಯರೆಲ್ಲ ಹೇಳಿರುವಂತೆ ಇದರಲ್ಲಿ ಯಾರಿಗೂ ಎರಡು ವಿಚಾರಗಳಿಲ್ಲ. ಮಾನ್ಯ ಸದಸ್ಯರಿಗೂ ಸರ್ಕಾರಕ್ಕೂ ಈ ವಿಚಾರಗಳಲ್ಲಿ ಭಿನ್ನಾಭಿಪ್ರಾಯವೇನೂ ಇಲ್ಲ. ಈಗ ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರಗಳೇನಿವೆ ಅವುಗಳಿಗೆ ಹೊಂದಾವಣಿಕೆಯಾಗತಕ್ಕಂಥ ಪಾಲಸಿ ಮತ್ತು ಧೋರಣೆಗಳನ್ನು ಸರ್ಕಾರ ಕೈಗೊಂಡಿದೆ. ಸಾಮಾನ್ಯವಾಗಿ ಜೈಲಿಗೆ ಬರತಕ್ಕಂಥ ಜನರಲ್ಲಿ ಸಮಾಜದಲ್ಲಿರುವ ಮಧ್ಯಮ ವರ್ಗದವರು. ಹೈಕ್ಲಾಸ್‌ಗೆ ಸೇರಿದ ಜನರು ಬರುವುದು ಬಹಳ ಅಪರೂಪ. ಕೀಳು ತರಗತಿಯ ಜನರೇ ಹೆಚ್ಚಾಗಿರುತ್ತಾರೆ. ಈ ಜನ ಜೈಲಿನಿಂದ ಹೊರಗಡೆ ಬಂದಮೇಲೆ ಸಮಾಜ ಇವರನ್ನು ದೂರವಿಟ್ಟು ಬಿಡುತ್ತದೆ. ಸಮಾಜದಿಂದಲೇ ಇವರನ್ನು ಹೊರಗೆ ಹಾಕಲಾಗುತ್ತಿದೆ. ಸಮಾಜ ಇವರನ್ನು ಒಳ್ಳೆಯ ಹಾದಿಗೆ ತರಲು ಪ್ರಯತ್ನ ಮಾಡುತ್ತಿಲ್ಲ. ಯಾರಾದರೂ ಏನೋ ಒಂದು ತಪ್ಪುಮಾಡಿ ಅಥವಾ ಏನೋ ಒಂದು ಕಾರಣದಿಂದ ಕಾನೂನು ಭಂಗಮಾಡಿ ಜೈಲಿಗೆ ಬರತಕ್ಕಂಥ ಜನಗಳಿಗೆ ಅವರು ಮಾಡಿರತಕ್ಕಂಥ ತಪ್ಪು ಕೃತ್ಯಗಳ ಬಗ್ಗೆ ಅಥವಾ ಅವರ ಒಂದು ದುಷ್ಟ ನಡತೆಯ ಬಗ್ಗೆ ಅವರು ಜೈಲಿನಲ್ಲಿ ವಾಸ ಮಾಡತಕ್ಕ ಅವಧಿಯೊಳಗೆ ಅವರ ಮನಸ್ಸಿಗೆ ಪಶ್ಚಾತ್ತಾಪ ಉಂಟಾಗಿ, ಇನ್ನು ಮುಂದಾದರೂ ನಾವು ಇಂಥ ಅಕೃತ್ಯಗಳನ್ನು ನಡೆಸಬಾರದೆಂದು ಅವರಲ್ಲಿ ಮಾನಸಿಕ ಪರಿವರ್ತನೆಯಾದರೆ ಆಗ ಅವರು ಜೈಲಿನಿಂದ ಹೊರಗಡೆಗೆ ಬಂದಾಗ ಇತರ ಎಲ್ಲ ಯೋಗ್ಯ ನಾಗರಿಕರಂತೆ ಒಂದು ಸನ್ಮಾರ್ಗದಲ್ಲಿ ಜೀವನ ನಡೆಸಿಕೊಂಡು ಹೋಗಲು ಯೋಗ್ಯವಾಗಿರುವಂಥ ರೀತಿಯಲ್ಲಿ ಈ ಜೈಲಿನ ಆಡಳಿತವನ್ನು ನಡೆಸಬೇಕೆಂದು ನಾವು ಪ್ರಯತ್ನ ಮಾಡಿದ್ದೇವೆ. ಆದರೆ ನಮ್ಮ ಈ ಪ್ರಯತ್ನ ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬುದನ್ನು ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ ಜೈಲಿನ ಆಡಳಿತವೆಲ್ಲ ಈ ದಿವಸ ಸರಿಯಾಗಿ ನಡೆಯುತ್ತಿದೆ ಇದರಲ್ಲಿ ನ್ಯೂನತೆಗಳೇನೂ ಇಲ್ಲ ಎಂದು ಹೇಳುವುದಕ್ಕಾಗಿ ನಾನೀಗ ನಿಂತಿಲ್ಲ. ಈಗ ತಾನೆ ಮಾತನಾಡಿದ ಶ್ರೀ ಸಿ. ಕೆ. ರಾಜಯ್ಯ ಶೆಟ್ಟರು ಜೈಲಿನ ಆಡಳಿತದ ಬಗ್ಗೆ ಬಹಳ ವಿವರವಾಗಿ ಮಾತನಾಡಿದ್ದಾರೆ. ಈ ಬಗ್ಗೆ ಅನೇಕ ಕುಂದು ಕೊರತೆಗಳಿರಬಹುದು. ಸದಸ್ಯರುಗಳು ಹೇಳಿರತಕ್ಕ ಅಂಶಗಳೆಲ್ಲ ಶುದ್ಧ ತಪ್ಪು, ಅವುಗಳೆಲ್ಲ ಸುಳ್ಳೆಂದು ಹೇಳುವುದಕ್ಕಾಗಿ ನಾನೀಗ ನಿಂತಿಲ್ಲ. ಈ ಜೈಲುಗಳ ಬಗ್ಗೆ ಏನೇನು ಸುಧಾರಣೆಗಳಾಗಬೇಕಾಗಿದೆಯೋ, ಆಡಳಿತದ ಬಗ್ಗೆ ಏನೇನು ಮಾರ್ಪಾಡುಗಳಾಗಬೇಕಾಗಿವೆಯೋ ಅವೆಲ್ಲವನ್ನೂ ನಾವೂ ನೀವೂ ಒಟ್ಟಾಗಿ ಒಮ್ಮನಸ್ಸಿನಿಂದ ಕೂಡಿ ಮಾಡೋಣ. ಈ ಬಗ್ಗೆ ನಮಗೆ ನಿಮ್ಮ ನೆರವು ಇದ್ದೇ ಇರುತ್ತದೆಂಬ ಭರವಸೆಯಿಂದ ನಾನೀಗ ಈ ಜೈಲುಗಳ ಆಡಳಿತ ನಡೆಸುತ್ತಿದ್ದೇನೆ. ಈ ಒಂದು ಅಭಿಪ್ರಾಯದ ಮೇಲೆ ಈ ಆಡಳಿತವನ್ನು ಸಾಧ್ಯವಾದ ಮಟ್ಟಿಗೂ ಸುಧಾರಣೆ ಮಾಡುತ್ತೇವೆಂಬ ಭರವಸೆಯನ್ನು ನಾನೀಗ ತಮಗೆ ಕೊಡುತ್ತಿದ್ದೇನೆ. ಆದರೆ ನಾನಾಗಲೇ ತಿಳಿಸಿದಂತೆ ಶಿಕ್ಷೆಗೆ ಗುರಿಯಾಗಿ ಜೈಲುಗಳಿಗೆ ಖೈದಿಗಳಾಗಿ ಬರತಕ್ಕ ಜನರಬಗ್ಗೆ ಅವರಲ್ಲಿ ಎಷ್ಟು ಜನ ಮಧ್ಯಮ ತರಗತಿಗೆ ಸೇರಿರುತ್ತಾರೆ, ಎಷ್ಟು ಜನ ಉಚ್ಚತರಗತಿಗೆ ಸೇರಿರುತ್ತಾರೆ ಎಂಬುದರ ಬಗ್ಗೆ ನಮಗಿನ್ನೂ ಖಚಿತವಾದ ಅಂಕಿ ಅಂಶಗಳು ದೊರತಿಲ್ಲ. ಆದರೆ ಇಷ್ಟು ಮಾತ್ರ ಹೇಳಬಹುದು. ಜೈಲಿಗೆ ಬರತಕ್ಕವರಲ್ಲಿ ವಿದ್ಯಾವಂತರಾದ ಜನರ ಹಾಗೂ ಹೈಕ್ಲಾಸ್ ಜನರ ಸಂಖ್ಯೆತೀರ ಅಲ್ಪ. ಜೈಲಿಗೆ ಖೈದಿಗಳಾಗಿ ಬರತಕ್ಕ ಜನರಲ್ಲಿ ನೂರಕ್ಕೆ ಸುಮಾರು 80 ಜನ ಯಾರಿರುತ್ತಾರೆಂದರೆ ಯಾರಿಗೆ ಸರಿಯಾಗಿ ತಮ್ಮ ಜೀವನ ನಡೆಸಲಿಕ್ಕೆ ಮಾರ್ಗವಿಲ್ಲವೋ ಯಾರಿಗೊಂದು ದುಡಿಮೆ ಮಾಡಲು ಮಾರ್ಗವಿರುವುದಿಲ್ಲವೋ ಅಂಥ ಜನರೇ ಹೆಚ್ಚಾಗಿರುತ್ತಾರೆ. ಆ ಜನರು ಕಾನೂನು ಭಂಗ ಮಾಡತಕ್ಕಂಥ ಕಾರ್ಯಗಳನ್ನು ಮಾಡುತ್ತಾರೆ. ಇನ್ನು ಬೇರೆ ಕಾರಣಗಳಿಂದ ಶಿಕ್ಷೆಗೊಳಗಾಗತಕ್ಕವರ ಸಂಖ್ಯೆ ಬಹಳ ಕಡಮೆ. ಜನಗಳಿಗೆ ಮೊದಲು ಹೊಟ್ಟೆಯ ಸಮಸ್ಯೆ. ಹೊಟ್ಟೆ ತುಂಬಿಕೊಳ್ಳಲು ಯಾವ ಉಪಾಯವೂ ಇಲ್ಲದೆ ಹೋದರೆ ಭಿಕ್ಷೆ ಬೇಡುತ್ತಾರೆ. ಸಮಾಜದಲ್ಲಿ ಅದಕ್ಕೂ ತಾಪತ್ರಯವಾದಾಗ ಅವರು ಅಕೃತ್ಯಗಳಿಗೆ ಕೈಹಾಕುತ್ತಾರೆ. ಸಮಾಜದಲ್ಲೂ ಕೆಲವು

(ಶ್ರೀ ವಿರೇಂದ್ರ ಪಾಟೀಲ್)

ಕೊರತೆಗಳಿವೆ. ಹೀಗೆ ಜನರು ದುರ್ದೈವದಿಂದ ನಾನಾ ರೀತಿಯಲ್ಲಿ ಕುಂದುಕೊರತೆಗಳಿಗೊಳಗಾಗಿ ಜೈಲುವಾಸಕ್ಕೆ ಬರುತ್ತಿದ್ದಾರೆ. ಇವರು ಜೈಲಿನಿಂದ ಹೊರಗೆ ಬಂದ ಅನಂತರವಾದರೂ ಇವರನ್ನು ಸಮಾಜ ಯಾವ ರೀತಿ ಕಾಣುತ್ತಿದೆ? ಈಗ ನಾನು ಹೇಳುತ್ತಿರುವ ವಿಚಾರಗಳೆಲ್ಲ ಕೇವಲ ನನ್ನ ವೈಯಕ್ತಿಕವಾದ ಅಭಿಪ್ರಾಯಗಳಾಗಿವೆ. ಆದುದರಿಂದ ಇವುಗಳು ಸರಿಯಾಗಿದ್ದರೂ ಇರಬಹುದು ಅಥವಾ ಸರಿಯಿಲ್ಲದಿದ್ದರೂ ಇರಬಹುದು. ಈ ಹಿಂದೆ ಇದೇ ವಿಧಾನ ಸೌಧ ಕಟ್ಟಡವನ್ನು ಕಟ್ಟುತ್ತಿದ್ದ ಕಾಲದಲ್ಲಿ ಕೆಲಸಮಾಡುತ್ತಿದ್ದ ಸಾಮಾನ್ಯ ಕೂಲಿಗಾರರ ಜೊತೆಗೆ ಈ ಕಟ್ಟಡದ ಕೆಲಸ ನಡೆಸಲು ಸೆಂಟ್ರಲ್‌ಜೈಲಿನಲ್ಲಿದ್ದ ಖೈದಿಗಳನ್ನೂ ಸಹ ಕರೆದುಕೊಂಡು ಬಂದಿದ್ದ ವೇಳೆಯಲ್ಲಿ ಆ ಸಾಮಾನ್ಯ ಕೂಲಿಗಾರರೆಲ್ಲ ನಾವು ಈಖೈದಿಗಳ ಜೊತೆಯಲ್ಲಿ ಕೆಲಸ ಮಾಡಲು ತಯಾರಿಲ್ಲವೆಂದು ಒಂದು ಪ್ರತಿಭಟನೆ ನಡೆಸಲಾಗಿತ್ತೆಂಬ ಒಂದು ಸುದ್ದಿಯನ್ನುನಾನು ಕೇಳಿದ್ದೆನು. ಆದರೆ ಆ ಕಾಲಕ್ಕೆ ನಾನು ಇಲ್ಲಿ ಇದ್ದಿಲ್ಲ. ಆದುದರಿಂದ ಆ ಸುದ್ದಿ ಎಷ್ಟರಮಟ್ಟಿಗೆ ಸರಿಯಾದದ್ದು ಅಥವಾ ಅಲ್ಲ ಎಂಬ ವಿಚಾರ ನನಗೆ ಗೊತ್ತಿಲ್ಲ. ಈಗ ನಾನು ಈ ವಿಚಾರವನ್ನು ಏಕೆ ಹೇಳುತ್ತಿದ್ದೇನೆಂದರೆ ಖೈದಿಗಳಾಗಿದ್ದಂಥ ಜನರು ಜೈಲಿನಿಂದ ಹೊರಕ್ಕೆ ಬಂದ ಮೇಲೆ ಏನೋ ದುರ್ದೈವದಿಂದ ತಪ್ಪುಮಾಡಿ ಶಿಕ್ಷೆಗೊಳಗಾಗಿದ್ದಾರೆ, ಇವರಿಗೂ ಸಮಾಜದಲ್ಲಿ ಒಂದು ಸ್ಥಾನಮಾನ ದೊರಕಿಸಿಕೊಡೋಣ ಎನ್ನುವಂಥಾ ಭಾವನೆ ಜನಗಳಲ್ಲಿಲ್ಲ. ಜೈಲಿನಿಂದ ಹೊರಗೆ ಬಂದ ಜನರನ್ನು ಯಾರೂ ಹತ್ತಿರ ಸೇರಿಸುವುದಿಲ್ಲ. ಎಲ್ಲಿಯೂ ಇವರಿಗೆ ಉದ್ಯೋಗಗಳು ದೊರೆಯುವುದಿಲ್ಲ. ಕೈಗಾರಿಕೆಗಳಲ್ಲಿ ಇವರಿಗೆ ಕೆಲಸ ಕೊಡಲು ಅವರಿಗೆ ಉತ್ತೇಜನವಿಲ್ಲ. ಹೀಗೆಲ್ಲಾ ಆಗಿ ಅವರ ಜೀವನವೇ ಒಂದು ಬಹಳ ದುಸ್ತರಸ್ಥಿತಿಯಲ್ಲಿರುತ್ತದೆಂಬುದನ್ನು ನಾನೀಗ ತಿಳಿಸುತ್ತಿದ್ದೇನೆ. ಇವರಿಗೆ ಎಲ್ಲಿಯೂ ಸಾಲ ದೊರೆಯುವುದಿಲ್ಲ. ಹೀಗೆಲ್ಲ ಸಮಾಜ ಈ ಜನರನ್ನು ಬಹಳ ಕೀಳು ದೃಷ್ಟಿಯಿಂದ ನೋಡುತ್ತಿದೆ. ಜೈಲಿನಿಂದ ಹೊರಗೆಬಂದ ಜನರು ಜೀವಂತರಾಗಿ ಬಾಳುವುದೇ ಬಹಳ ಕಷ್ಟವಾಗಿದೆ. ಈ ದಿವಸ ನಮ್ಮ ಸಮಾಜ ಈ ರೀತಿಯಲ್ಲಿರುತ್ತದೆಂದು ನನ್ನ ಭಾವನೆ. ಈ ದಿವಸ ಕೆಲವು ಕಡೆ ಜೈಲಿಗೆ ಬರತಕ್ಕ ಜನರಲ್ಲಿ ನಾಲ್ಕನೆಯ ಸಲಕ್ಕೆ, ಐದನೆಯ ಸಲಕ್ಕೆ, ಆರನೆಯ ಸಲಕ್ಕೆ, ಏಳನೆಯ ಸಲಕ್ಕೆ ಬರುತ್ತಿರುವಂಥಾ ಜನರೂ ಇದ್ದಾರೆ. ಮೊದಲನೆಯ ಸಲ ಜೈಲಿಗೆ ಬಂದಿರತಕ್ಕಂಥ ಜನರ ಸಂಖ್ಯೆ ಬಹಳ ಕಡಮೆ. ಜನರು ಹೀಗೆ ಏನೋ ಕಾರಣಾಂತರದಿಂದ ಒಂದು ಸಾರಿ ಜೈಲಿಗೆ ಹೋಗಬಹುದು. ಆದರೂ ಸಮಾಜ ಅವರನ್ನು ಪುನಃ ಮೇಲಕ್ಕೆತ್ತಿಕೊಳ್ಳಬೇಕು. ಅವರಿಗೂ ಸಮಾಜದಲ್ಲೊಂದು ಸ್ಥಾನಮಾನ ಕೊಡಬೇಕು. ಇಂಥ ಒಂದು ಸದ್ಭಾವನೆ ಸಮಾಜ ಬಾಂಧವರಲ್ಲಿ ಬರಬೇಕಾದದ್ದು ಅತ್ಯಗತ್ಯ. ಈ ವಿಚಾರಗಳಲ್ಲೆಲ್ಲ ಸಮಾಜ ಮತ್ತು ಸರ್ಕಾರ ಒಟ್ಟಿಗೆ ಸೇರಿ ಒಂದು ಸುಧಾರಣೆ ತರಬೇಕಾಗಿದೆ ಎಂದು ಶ್ರೀ ಮಲ್ಲಾರಾಧ್ಯರವರು ಹೇಳಿದ್ದು ಸರಿ. ಈ ಕಾರ್ಯ ಬರಿಯ ಜೈಲಿನ ಅಡ್ಮಿನಿಷ್ಟ್ರೇಷನ್ನಿನ ಸುಧಾರಣೆಯೊಂದರಿಂದಲೇ ಆಗದು. ಈ ವಿಚಾರಗಳೆಲ್ಲ ಅಷ್ಟೇನೂ ಮಹತ್ತರವಾದುವುಗಳಲ್ಲ. ನಮ್ಮಲ್ಲಿ ಈ ದಿವಸ ಸಮಾಜದಲ್ಲಿ ಅಂಥ ಮಹತ್ತರವಾದ ಇನ್‌ಸ್ಟಿಟ್ಯೂಷನ್‌ಗಳಿಲ್ಲ. ಸಂಸ್ಥೆಗಳಾಗಲೀ—ಸಮಾಜವಾಗಲಿ ಅಷ್ಟು ಕಡೆಗಣ್ಣಿನಿಂದ ನೋಡತಕ್ಕಂಥ ವಿಚಾರವಲ್ಲ ಇದು. ಈ ದಿವಸ ಸಮಾಜ ಏನೋ ಒಂದು ರೆಪುಟೇಷನ್ ಸಲುವಾಗಿ ಈ ರೀತಿ ಕೀಳು ಭಾವನೆಯಿಂದ ಕಾಣುತ್ತಿದೆ. ಈ ಜನರನ್ನು ನಮ್ಮ ಸಮಾಜ ಮತ್ತು ಸಂಸ್ಥೆಗಳು ಅಭಿವೃದ್ಧಿಗೆ ತರಬೇಕಾಗಿದೆ. ಎಲ್ಲರೂ ಸೇರಿ ಮಾಡತಕ್ಕಂಥ ಒಂದು ಮಹತ್ಕಾರ್ಯ ಇದು ಎಂದು ತಿಳಿಸಲಿಚ್ಛಿಸುತ್ತೇನೆ. ಸರ್ಕಾರದವರಾದರೂ ಸಹ ಈ ವಿಚಾರವನ್ನು ಅಷ್ಟೇನೂ ಲಘುವಾಗಿ ಕಾಣುತ್ತಿಲ್ಲ, ಇದಕ್ಕೆ ಒಂದೇ ಉದಾಹರಣೆ ಕೊಡಬೇಕೆಂದರೆ—ಈ ವಿಚಾರ ಹಳೆಯ ಮೈಸೂರಿನವರಿಗೆ ಚೆನ್ನಾಗಿ ಗೊತ್ತಿದೆ.—ಈ ಹಿಂದೆ ಮೈಸೂರಿನಲ್ಲಿ ಜೈಲ್ ಅಡ್ಮಿನಿಷ್ಟ್ರೇಷನ್ ಬಗ್ಗೆ ಒಬ್ಬ ಪ್ರತ್ಯೇಕ ಇಲಾಖಾ ಮೊಖ್ತೇಸರರು ಇದ್ದಿಲ್ಲ. ಬೇರೆ ಇಲಾಖೆಗಳ ಅಧಿಕಾರಿಗಳು ಈ ಬಾಬನ್ನು ಪಾರ್ಟ್‌ಟೈಂವರ್ಕ್‌ನೋಪಾದಿಯಲ್ಲಿ ನೋಡಿಕೊಳ್ಳುತ್ತಿದ್ದರು. ಕೆಲವುಕಾಲ ಮೆಡಿಕಲ್ ಇಲಾಖೆಯ ಮೊಖ್ತೇಸರರೂ, ಕೆಲವು ಕಾಲ ಡಿಸ್ಟ್ರಿಕ್ಟ್ ಜಡ್ಜರೂ ಹೀಗೆ ಇನ್ನೂ ಯಾರು ಯಾರೋ ಇದರ ಆಡಳಿತ ನೋಡಿಕೊಳ್ಳುತ್ತಿದ್ದರು. ಆದರೆ ಇತ್ತೀಚೆಗೆ ರಾಜ್ಯಗಳ ಪುನರ್‌ನಿರ್ಮಾಣವಾದ ನಂತರ ಸರ್ಕಾರ ಈ ಇಲಾಖೆಗೇ ಪ್ರತ್ಯೇಕವಾಗಿ ಒಂದು ಇನ್‌ಸ್ಪೆಕ್ಟರ್ ಜನರಲ್ ಆಫ್ ಪ್ರಿಸನ್ಸ್ ಎಂಬ ಹುದ್ದೆಯನ್ನು ನೇಮಕ ಮಾಡಿದೆ. ಇತ್ತೀಚೆಗೆ ಹೊಸ ಮೈಸೂರು ರಾಜ್ಯವಾದ ಮೇಲೆ ದೇಶ ಮೊದಲಿದ್ದುದಕ್ಕಿಂತಲೂ ಎರಡು ಪಟ್ಟು ಹೆಚ್ಚಾಗಿದೆ. ಜೈಲುಗಳ ಮತ್ತು ಲಾಕಪ್‌ಗಳ ಸಂಖ್ಯೆ ಜಾಸ್ತಿಯಾಗಿದೆ. ಇವುಗಳ ಆಡಳಿತವನ್ನು ಒಂದು ಸುವ್ಯವಸ್ಥೆಯಿಂದ ನಡೆಸುವಂತೆ ಮಾಡಬೇಕೆಂಬ ಉದ್ದೇಶದಿಂದ ತಾರೀಖು ಒಂದನೆ ನವಂಬರ್ 1956ರಲ್ಲಿ Inspector General of Prisons ಎಂಬ ಉಚ್ಚ ದರ್ಜೆಯ ಅಧಿಕಾರಿಗಳನ್ನು ನೇಮಿಸಲಾಯಿತು. ಆದರೆ ಕೆಲವು ಕಾರಣಗಳಿಂದ ಅವರ ಮೇಲೆ ಯಾವುದೋ ಒಂದು ಎನ್‌ಕ್ವೈರಿ ನಡೆಯುತ್ತಿದೆ. ಆದ್ದರಿಂದ ಈಗ ಆ ಸ್ಥಳ ಖಾಲಿ ಇದೆ. ಆದರೆ ಇವರ ವಿಚಾರಣೆ ಆದಷ್ಟು ಬೇಗ ಪೂರೈಸಬಹುದು, ಆಗ ಅವರನ್ನೇ ಆ ಸ್ಥಾನಕ್ಕೆ ಹಾಕಿದರಾಗುತ್ತದೆಂಬ ಉದ್ದೇಶದಿಂದ ಬೇರೆ ಯಾರನ್ನೂ ಈ ಸ್ಥಾನಕ್ಕೆ ನೇಮಕ ಮಾಡಿಲ್ಲ. ಅವರ ಬಗ್ಗೆ ನಡೆಯಲಿರುವ ಎನ್‌ಕ್ವೈರಿ ಆದಷ್ಟು ಬೇಗ ಪೂರೈಸಿ ವಿಚಾರಗಳೆಲ್ಲ ಒಂದು ಹಾದಿಗೆ ಬರಬಹುದೆಂಬ ಆಸೆಯಿಂದ ಈ ಸ್ಥಾನವಿನ್ನೂ ಖಾಲಿ ಇದೆ. ಈ ಬಗ್ಗೆ ನಾವು ಆದಷ್ಟು ತ್ವರಿತದಿಂದ ವಿಚಾರ ಮಾಡುತ್ತೇವೆಂದು ತಮಗೆ ನಾನು ಆಶ್ವಾಸನ ಕೊಡಬಯಸುತ್ತೇನೆ.

ಇನ್ನು ಮುಂದೆ, ಮಾನ್ಯ ಸದಸ್ಯರು ಒಬ್ಬೊಬ್ಬರೂ ಇದರ ಆಡಳಿತದ ಬಗ್ಗೆ ಟೀಕೆಗಳನ್ನೂ ಸಲಹೆಗಳನ್ನೂ ಏನು ಹೇಳಿದ್ದರೋ ಅದಕ್ಕೆ ಉತ್ತರ ಕೊಡುತ್ತೇನೆ. ವಿರೋಧ ಪಕ್ಷದ ನಾಯಕರಾದ ಶ್ರೀ ಕೆಂಚಪ್ಪನವರು ಮತ್ತು ಇನ್ನೂ ಅನೇಕ ವಿರೋಧ ಪಕ್ಷದ ಸದಸ್ಯರೂ ಈಗ ಸೋಷಿಯಲಿಸ್ಟರು ನಡೆಸುತ್ತಿರತಕ್ಕ ಸತ್ಯಾಗ್ರಹದ ಸಂಬಂಧದಲ್ಲಿ ಯಾರು ಯಾರು ಜೈಲಿನಲ್ಲಿದ್ದಾರೋ ಅವರನ್ನೂ ಕೂಡ ಸರ್ಕಾರ ಸರಿಯಾಗಿ ನೋಡಿಕೊಳ್ಳುತ್ತಿಲ್ಲ, ಅವರಿಗೆ ಸಾಕಷ್ಟು ಸೌಲಭ್ಯ, ಸೌಕರ್ಯಗಳನ್ನು ಕೊಡುತ್ತಿಲ್ಲ, ಅವರನ್ನೂ ಮನುಷ್ಯರಂತೆ ಕಾಣುವುದು ಸರ್ಕಾರದ ಧರ್ಮ ಎಂಬದಾಗಿ ಟೀಕೆ ಮಾಡಿದ್ದಾರೆ. ಹಾಲಿ ಸೋಷಿಯಲಿಸ್ಟ್ ಖೈದಿಗಳಿಗೆ ಕೊಟ್ಟಿರತಕ್ಕ ಸೌಕರ್ಯಗಳೇನು ಮತ್ತು ಅವರು ನಮ್ಮ ಮುಂದಿಟ್ಟಿರತಕ್ಕ demands ಏನು ಎಂಬುದನ್ನು ಸ್ವಲ್ಪದರಲ್ಲಿ ತಮ್ಮ ಮುಂದೆ ಇಡಬಯಸುತ್ತೇನೆ. ಸೋಷಿಯಲಿಸ್ಟ್ ಖೈದಿಗಳು 30ನೆಯ ಜನವರಿ 1958 ರಿಂದ ತಮ್ಮ ಚಳವಳಿ ಪ್ರಾರಂಭ ಮಾಡಿದ್ದಾರೆ. ಇದಕ್ಕೆ ಕಾರಣ ಅವರು ಕೊಟ್ಟಿದ್ದ 16 ಅಂಶಗಳ ಡಿಮ್ಯಾಂಡ್

ಪಟ್ಟಿಯಲ್ಲಿ ಏನೇನು ಹೇಳಿತ್ತೋ ಅದನ್ನು ಸರ್ಕಾರ ಒಪ್ಪಲಿಲ್ಲ ಎಂಬುದು. ಅದರ ಸಲುವಾಗಿ ಕಾನೂನು ಭಂಗಮಾಡಿ ಜೈಲಿಗೆ ಬರುವುದಕ್ಕೆ ಆರಂಭಿಸಿದರು.

ಈ ವಿಚಾರಗಳಲ್ಲಿ, ನಾವು ಜೈಲು ಮ್ಯಾನ್ಯುಯಲ್ ಪ್ರಕಾರ ಯಾವ ರೂಲ್ಸ್ ಹಾಕಿಕೊಂಡಿದ್ದೇವೋ ಅದನ್ನು ಅನುಸರಿಸುವುದು ಸ್ವಾಭಾವಿಕ. ಅವರು ಕೋರ್ಟ್ ಮುಂದೆ ಹೋದ ತರುವಾಯ ಶಿಕ್ಷೆಯಾಯಿತು. Under Trial Prisoner ಆಗಿದ್ದಾಗ ಅಥವಾ convict ಆದ ತರುವಾಯ ಅವರಿಗೇನಾದರೂ special classification ಆಗಬೇಕಾದರೆ, ತಮ್ಮ ಸಮಾಜದ ಸ್ಥಾನಕ್ಕೆ, ಅಂತಸ್ತಿಗೆ ಅನುಸಾರವಾಗಿ ಹೀಗೆ ಇರಿಸಬೇಕು, ಇಂಥ ಸೌಲಭ್ಯಗಳು ಬೇಕು ಎಂದು ಅಪೇಕ್ಷಿಸುವುದಾದರೆ, ಆತನು ಕೋರ್ಟಿಗೆ ಹೋಗಿ apply ಮಾಡಿಕೊಳ್ಳಬೇಕು.

AN HON'BLE MEMBER.—Then he would not be a Sathyagrahi.

ಶ್ರೀ ವೀರೇಂದ್ರ ಪಾಟೀಲ್.—ಅವರು ಸತ್ಯಾಗ್ರಹಿಗಳೇ ಇರಬಹುದು. ಆದರೂ ಕ್ರಿಮಿನಲ್ ಪ್ರೊಸೀಜರ್ ಕೋಡ್, ಇಂಡಿಯನ್ ಪೀನಲ್ ಕೋಡ್ ಪ್ರಕಾರ ಅವರಿಗೆ ಶಿಕ್ಷೆಯಾಗಿದೆ. ಶಿಕ್ಷೆ ಭೋಗಿಸುತ್ತಿದ್ದಾರೆ. ಆಗ್ಗೆ ಅವರು ತಮ್ಮ classification ಸಲುವಾಗಿ ಕೋರ್ಟಿಗೆ ಹೋಗಿ ಕೇಳಬಹುದಾಗಿತ್ತು. ತಾವು political prisoners, ತಮ್ಮನ್ನು ಈ ರೀತಿಯಾಗಿ classify ಮಾಡಬೇಕು ಎಂದು ಹೇಳುವುದರಲ್ಲಿ ಅವರಿಗೇನೂ ಅಡ್ಡಿ ಇರಲಿಲ್ಲ. ನನಗೆ ತಿಳಿದ ಮಟ್ಟಿಗೆ ಅವರು ಯಾರೂ ಹಾಗೆ ಅರ್ಜಿ ಹಾಕಿಲ್ಲ. ಅವರು ನೇರವಾಗಿ ಸೂಪರಿಂಟೆಂಡೆಂಟರನ್ನೂ ತರುವಾಯ ಅಲ್ಲಿರತಕ್ಕ ಅಧಿಕಾರಿಗಳನ್ನೂ ನಮಗೆ ಈ ರೀತಿಯಾದಂಥ ಸೌಲಭ್ಯಗಳು ಬೇಕು, ಅಷ್ಟನ್ನೂ ಒದಗಿಸದಿದ್ದರೆ ತಾವು ಉಪವಾಸದ ಮುಷ್ಕರ ಹೂಡುತ್ತೇವೆಂದು ಹೇಳಿದರು. ನಮ್ಮಲ್ಲೂ ಕೂಡ ಅನೇಕ ಜನರು ಸತ್ಯಾಗ್ರಹ ಮಾಡಿದ್ದೇವೆ. ಇದೇನೂ ನಮಗೆ ಹೊಸದಲ್ಲ. ಯಾವ ರೀತಿ ನಡೆದುಕೊಳ್ಳಬೇಕೆಂದು ತಮ್ಮಿಂದ ಬುದ್ಧಿವಾದ ತೆಗೆದುಕೊಳ್ಳುವಂಥ ಅವಶ್ಯಕತೆಯಿಲ್ಲ. ಅಲ್ಲದೆ ಅವರಿಗೀಗ A ಕ್ಲಾಸ್‌ಗಿಂತ ಹೆಚ್ಚಿಗೆ ಅನುಕೂಲಗಳನ್ನು ಕೊಟ್ಟಿದೆ. ಅವರಿಗೆ ಕೊಟ್ಟಿರುವುದನ್ನು ಹೇಳುವುದಕ್ಕೆ ಮುನ್ನ A ಕ್ಲಾಸ್ ಖೈದಿಗಳಿಗೆ ಏನು ಕೊಡುತ್ತಾರೆ, ಜೈಲ್ ಮಾನ್ಯುಯಲ್ ಪ್ರಕಾರ ಏನಿದೆಯೆಂದು ಹೇಳುತ್ತೇನೆ. A ಕ್ಲಾಸ್ ಖೈದಿಗಳಿಗೆ. . . . .

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾನು 840 ಜನ ಕಾಂಗ್ರೆಸ್ಸಿನವರನ್ನು convict ಮಾಡಿದ್ದೇನೆ!! . . . .840 Congressmen including top ranking persons!

ಶ್ರೀ ವೀರೇಂದ್ರ ಪಾಟೀಲ್.—A ಕ್ಲಾಸ್ ಖೈದಿಗಳಿಗೆ ಒದಗಿಸುವ ಸೌಲಭ್ಯಗಳು :

Morning—Wheat bread, tea or coffee.

Mid Day—Rice and wheat chapathi, ghee, vegetable curry, pepper water, butter-milk, curds.

Evening.—Tea or Coffee.

Night.—Rice and wheat chapathi, two vegetable curries, ghee, pepper water, butter milk.

ಶ್ರೀ ಜಿ. ಶಿವಪ್ಪ.—ಇದನ್ನೆಲ್ಲಾ ಕೊಟ್ಟರೂ ಕೂಡ P.S.P.ಯವರು ಹೋರಾಡುತ್ತಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಇವು ಅವರು ಮೊದಲು ಬೇಡಿದ್ದು. ಮೊದಲು ಅವರು ಕೇಳಿದ್ದನ್ನು ಕೊಟ್ಟೆವು. ಆಮೇಲೆ ಇನ್ನೊಂದು ಬೇಕೆಂದು ಕೇಳಿದರು. ಅದನ್ನೂ ಕೊಟ್ಟೆವು. ಇದು ಕೊನೆಗೆ ಎಲ್ಲಿಗೆ ಬಂದಿದೆಯೆಂದು ಹೇಳುತ್ತೇನೆ : ಈಗ ಅವರು Soap soapnut powder, tooth powder, daily hot, water bath, one ounce of ghee, one coconut, toilet soap, news papers, beedis ಇತ್ಯಾದಿಗಳನ್ನು ಕೇಳುತ್ತಿದ್ದಾರೆ. ನಾವು ಮೇಲೆ ಹೇಳಿದಂತೆ ಸೌಲಭ್ಯಗಳನ್ನು ಒದಗಿಸಿದ ಅನಂತರವೂ ಸೆಂಟ್ರಲ್ ಜೈಲಿನ ಆರು ಏಳು ಜನರು ಸರ್ಕಾರಕ್ಕೆ 27ನೆಯ ಮಾರ್ಚಿ 1958ರಲ್ಲಿ ಒಂದು ನೋಟೀಸ್ ಕೊಟ್ಟರು. ನಮ್ಮ ಈ ಬೇಡಿಕೆಗಳನ್ನು ಪೂರೈಸದಿದ್ದರೆ 10ನೆಯ ಏಪ್ರಿಲ್ 1958ರಿಂದ ಮತ್ತೆ strike ಮಾಡುತ್ತೇವೆಂದು ತಿಳಿಸಿದ್ದಾರೆ. ಇದನ್ನೇಕೆ ತಮ್ಮ ಮುಂದೆ ಹೇಳುತ್ತೇನೆಂದರೆ, ತಾವು ರಚನಾತ್ಮಕ ರೀತಿಯಿಂದ ಸಲಹೆ ಕೊಡುತ್ತೀರೆಂದು ನನಗೆ ಗೊತ್ತು. ಅವರು ಕೇಳಿದ್ದಾರೆ :

"Increase in the quantity of coffee, sugar, milk. Supply of a table, chair, good blanket and mosquito net. Supply of two sets of non-prisoner's clothing, a pair of footwear, a pair of towels, tooth paste and tooth brush, and oil bath every week, meat to be given thrice a week, quantity of fuel to be increased, newspapers, a pack of Player's cigarette per day, to be provided." ಅವರ ಡಿಮ್ಯಾಂಡ್‌ಗಳು ಏನು ಎಂಬುದನ್ನು ತಮ್ಮ ಮುಂದಿಟ್ಟಿದ್ದೇನೆ. ಪ್ರತಿಯೊಬ್ಬರಿಗೂ ಪ್ಲೇಯರ್ಸ್ ಸಿಗರೇಟ್ ಪ್ಯಾಕೆಟ್ ಬೇಕೆಂದು ಹೇಳಿದರೆ, ಆ ಬೇಡಿಕೆಗಳು ಎಷ್ಟು ಮಾತ್ರ ಯೋಗ್ಯವಾಗಿವೆ? ಎಲ್ಲಿಯವರೆಗೆ ನಾವು ಆ ಬೇಡಿಕೆಗಳನ್ನು ಪೂರೈಕೆ ಮಾಡಿಕೊಂಡು ಹೋಗಬೇಕು?—ಇದಾದ ಮೇಲೆ ಅವರೇನು ಬೇಡುತ್ತಾರೆಂಬುದನ್ನೂ ಹೇಳುವುದಕ್ಕೆ ಸಾಧ್ಯವಿಲ್ಲ! ಈ ರೀತಿಯಾಗಿ, ದೇಶದಲ್ಲಿ ಸೋಷಿಯಲಿಸ್ಟ್ ಆರ್ಡರ್ ತರಬೇಕೆಂದು ಹೇಳುವ ಜನ, ಜನಸಾಮಾನ್ಯರ ಪರಿಸ್ಥಿತಿ, ರೀತಿನೀತಿಗಳನ್ನು ಬದಲಾಯಿಸಬೇಕೆಂದು ಹೇಳುವ ಜನ, ಪ್ಲೇಯರ್ಸ್ ಸಿಗರೇಟ್ ಬೇಕು ಎಂದೆಲ್ಲಾ ಬೇಡುತ್ತಾ ಹೋದರೆ ಏನು ಹೇಳೋಣ! ನಾನು ತಮ್ಮನ್ನೇ ಕೇಳುತ್ತೇನೆ, ಇವತ್ತಿನ ದಿವಸ ನಮ್ಮ ಸಮಾಜದಲ್ಲಿ, ಈ ಮಾನ್ಯ ಸದಸ್ಯರಲ್ಲೇ ಇಷ್ಟು ಐಟಂಗಳನ್ನು, ಊಟ, ಉಡಿಗೆತೊಡಿಗೆಗಳನ್ನು ಹೊಂದಿರುವವರು ಎಷ್ಟು ಜನರಿದ್ದಾರೆ?

ಶ್ರೀ ಕೆ. ಕೆಂಚಪ್ಪ.—ತಾವೇನು ಮಾಡುತ್ತೀರಿ?

ಶ್ರೀ ವೀರೇಂದ್ರ ಪಾಟೀಲ್.—ನಾವು ಸಿಗರೇಟೇ ಸೇದುವುದಿಲ್ಲ. ಇವರು ರಾಜಕೀಯ ಬಂದಿಗಳು!!

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ತೆಂಗಿನಕಾಯನ್ನು ತೆಗೆದುಕೊಂಡು ಏನು ಮಾಡುತ್ತಾರೆ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ದೇವಸ್ಥಾನದಲ್ಲಿ ಒಡೆಯಲಿಕ್ಕೆ ತೆಗೆದುಕೊಂಡು ಹೋಗುತ್ತಾರೆ. (ನಗು)

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಲೀಡರ್ ಆಫ್ ದಿ ಅಪೊಸಿಷನ್ನಿನವರಾದ ಶ್ರೀ ಕೆ. ಕೆಂಚಪ್ಪ ನವರು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಿದರು. ನಮ್ಮಲ್ಲಿ ಜೈಲುಗಳಲ್ಲಿರುವ ಲಾಕಪ್ಪುಗಳು ಇಂಗ್ಲಿಷರ ಕಾಲದಲ್ಲಿ ಕಟ್ಟಿದ್ದಂತೆ "ಬ್ಲಾಕು ಹೋಲ್ ಆಫ್ ಕಲ್ಕತ್ತಾ" ಇದ್ದಂತಿವೆ ಎಂದು ಹೇಳುತ್ತ ಇಂತಹ ಜೈಲುಗಳಲ್ಲಿರುವುದು ಯೋಗ್ಯವಲ್ಲ ಮತ್ತು ಯಾವ ಜೈಲುಗಳೂ ಇರಲು ಯೋಗ್ಯವಾಗಿಲ್ಲ ಎಂದರು.

ಶ್ರೀ ಕೆ. ಕೆಂಚಪ್ಪ.—ಕೆಲವು ಯೋಗ್ಯವಾದುವೂ ಇವೆ ಎಂದು ಹೇಳಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ದಾವಣಗೆರೆಯೊಂದನ್ನು ಬಿಟ್ಟರೆ ಮತ್ತಾವುದೂ ಇಲ್ಲವೆಂದು ತಾವು ಹೇಳಿದ್ದೀರಿ. ಲಾಕಪ್ ಮತ್ತು ಜೈಲುಗಳ ಪರಿಸ್ಥಿತಿಯನ್ನು ನೋಡಿಕೊಂಡು ಯಾವುದು ಕಟ್ಟಿಸುವುದಕ್ಕೆ ಸಾಧ್ಯವಿದೆ, ಅದನ್ನು ಕಟ್ಟಿಸುವುದಕ್ಕಾಗಿ ವಿಚಾರ ಮಾಡುತ್ತಿದ್ದೇವೆ. ಆದರೆ ನಾನು ತಮಗೆ ಈ ವಿಚಾರವನ್ನು ತಿಳಿಸುತ್ತೇನೆ. 1947ನೆಯ ಇಸವಿಯ ಅನಂತರ ಮಂಡ್ಯದಲ್ಲಿರುವ ಡಿಸ್ಟ್ರಿಕ್ಟ್ ಲಾಕಪ್ಪನ್ನು ಹೊಸದಾಗಿ ಕಟ್ಟಿಸಲಾಯಿತು. ಇದೇ ರೀತಿಯಾಗಿ ಕೋಲಾರದ ಡಿಸ್ಟ್ರಿಕ್ಟಿನ ಲಾಕಪ್ಪನ್ನು ಹೊಸದಾಗಿ ಕಟ್ಟಿಸಲಾಯಿತು. ಇದೇ ರೀತಿ ಕೆ.ಜಿ.ಎಫ್.ನಲ್ಲಿಯೂ ಕೂಡ ಸ್ಪೆಷಲ್ ಲಾಕಪ್ಪನ್ನು ಹೊಸದಾಗಿ ಕಟ್ಟಿಸಲಾಯಿತು.

ಶ್ರೀ ಕೆ. ಕೆಂಚಪ್ಪ.—ಪೋಲೀಸು ಸ್ಟೇಷನ್ನಿನಲ್ಲಿರುವ ಲಾಕಪ್ಪುಗಳ ವಿಚಾರ ಹೇಳಿ. ಎಲ್ಲ ಕಡೆಯೂ ಡಿಸ್ಟ್ರಿಕ್ಟ್ ಲಾಕಪ್ಪುಗಳಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅನಂತರ ಚಿತ್ರದುರ್ಗದಲ್ಲಿರುವ ಡಿಸ್ಟ್ರಿಕ್ಟ್ ಲಾಕಪ್ಪನ್ನು ಸರಿಪಡಿಸಲು ಇತ್ತೀಚೆಗೆ ಕೆಲವು ಅಡಿಷನಲ್ ಮತ್ತು ಮೈನರ್ ಇಂಪ್ರೂವ್‌ಮೆಂಟುಗಳನ್ನು ಮಾಡಲಾಗಿದೆ. ಮತ್ತೆ ಇನ್ನೂ ಕೆಲವು ಕಡೆಗಳಲ್ಲಿ ಈ ರೀತಿಯಾದ ರಿಪೇರಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೆಲವು ಮಾನ್ಯ ಸದಸ್ಯರು ಈ ಬೆಂಗಳೂರಿನಲ್ಲಿರತಕ್ಕ ಸೆಂಟ್ರಲ್ ಜೈಲನ್ನು ಕಟ್ಟಿರುವ ಸ್ಥಳವು ಲಾಯಕ್ಕಾಗಿಲ್ಲ, ಅದರಿಂದ ಈ ಸೆಂಟ್ರಲ್ ಜೈಲನ್ನು ಇಲ್ಲಿಂದ ತೆಗೆದುಹಾಕಿ ಮತ್ತೊಂದು ಕಡೆ ಕಟ್ಟಬೇಕು ಎಂದು ಹೇಳಿದರು. ಇದನ್ನು ಶ್ರೀ ಮಲ್ಲಾರಾಧ್ಯರೂ ಹೇಳಿದ ಹಾಗೆ ಜ್ಞಾಪಕವಿದೆ. ಇದರ ಬಗ್ಗೆ ಸರಕಾರ ವಿಚಾರ ಮಾಡಿ ನಿರ್ಣಯವನ್ನು ತೆಗೆದುಕೊಂಡಿದೆ. ಬೆಂಗಳೂರಿನಲ್ಲಿ ಈಗಿರುವ ಸೆಂಟ್ರಲ್ ಜೈಲನ್ನು ತೆಗೆದು ಮೆಂಟಲ್ ಹಾಸ್ಪಿಟಲ್ ಹತ್ತಿರ ಕಟ್ಟಬೇಕೆಂದು ಈಗಾಗಲೇ ಒಂದು ಸೈಟನ್ನು ಕೊಂಡುಕೊಳ್ಳಲಾಗಿದೆ ಮತ್ತು ಇದಕ್ಕಾಗಿ ಜಮೀನನ್ನೂ ಸಹ ಅಕ್ವೈರು ಮಾಡಲಾಗಿದೆ. ಇದಕ್ಕಾಗಿ ಪ್ಲಾನು, ಎಸ್ಟಿಮೇಟು ಇವುಗಳನ್ನೆಲ್ಲ ಪ್ರಿಪೇರ್ ಮಾಡಿ ನಮ್ಮ ಹತ್ತಿರ ಕಳಿಸಿದ್ದಾರೆ. ಆದಷ್ಟು ತೀವ್ರವಾಗಿ ಈ ಜೈಲನ್ನು ಕಟ್ಟಿಸಬೇಕು ಎಂದು ನಿರ್ಣಯವನ್ನು ತೆಗೆದುಕೊಂಡು ಗವರ್ನಮೆಂಟ್ ಆರ್ಡರನ್ನು ಪಾಸು ಮಾಡಿಸಿ ಪ್ಲಾನು, ಎಸ್ಟಿಮೇಟು ಬಂದ ತಕ್ಷಣ ಅಲ್ಲಿ ಜೈಲಿನ ಕಟ್ಟಡವನ್ನು ಕಟ್ಟಿ ಇದನ್ನು ಅಲ್ಲಿಗೆ ವರ್ಗಾಯಿಸಲಾಗುತ್ತದೆ ಎನ್ನುವ ಭರವಸೆಯನ್ನು ತಮಗೆ ಕೊಡುತ್ತೇನೆ. ನನಗೆ ಬೊಂಬಾಯಿ ಏರಿಯಾದ ಮಾಹಿತಿ ಇಲ್ಲ ಮತ್ತು ಆ ಕಡೆಗೆ ಹೋಗಿಲ್ಲ ಮತ್ತು ಅಲ್ಲಿನ ಜೈಲುಗಳ ಪರಿಸ್ಥಿತಿಯನ್ನು ನಾನು ನೋಡಿಕೊಂಡಿಲ್ಲ. ಆದರೆ ನನ್ನ ಭಾಗದ ಜಿಲ್ಲೆಗಳ ಪರಿಸ್ಥಿತಿ ಗೊತ್ತು. ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಒಂದು ಸೆಂಟ್ರಲ್ ಜೈಲು ಇದೆ. ಇದನ್ನು ಎಷ್ಟೋ ಜನ ಹೊರಗಿನಿಂದ ಬಂದು ನೋಡಿಕೊಂಡು ಹೋಗುತ್ತಿದ್ದರು. ಅಷ್ಟು ಚೆನ್ನಾಗಿದೆ ಅದು.

ಅಧ್ಯಕ್ಷರು.—ಹಿಂದೆ ಬೆಳಗಾವಿಯಲ್ಲಿದ್ದ ಜೈಲಿನ ಹಾಗಿದೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಈ ರೀತಿ, ಜೈಲುಗಳು ಹೈದರಾಬಾದು ಕರ್ನಾಟಕದ ಭಾಗಗಳಲ್ಲಿ ಸಾಕಷ್ಟು ಚೆನ್ನಾಗಿ ಮತ್ತು ಸರಿಯಾದ ಸ್ಥಿತಿಯಲ್ಲಿವೆ. ಅಷ್ಟು ಕೆಟ್ಟ ಸ್ಥಿತಿಯಲ್ಲಿಲ್ಲ. ಆದರೂ ಕೂಡ ಶ್ರೀ ಕೆಂಚಪ್ಪನವರು ಹೇಳಿದ ಹಾಗೆ ಎಲ್ಲೆಲ್ಲಿ ರಿಪೇರಿಗಳು, ಅಡಿಷನ್ನು ಆಲ್ಟರೇಷನ್ನು ಆಗಬೇಕಾಗಿದೆಯೋ ಅಲ್ಲೆಲ್ಲ ಮಾಡುವುದು ಅಗತ್ಯವಾಗಿದೆ. ಅದನ್ನೆಲ್ಲ ನಾವು ಮಾಡಲಿಕ್ಕೆ ತಯಾರಿದ್ದೇವೆ ಮತ್ತು ಅದನ್ನು ಮಾಡುತ್ತೇವೆ. ಇದನ್ನು ಮಾಡುವುದರ ಸಲುವಾಗಿ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ ಎನ್ನುವ ಭರವಸೆಯನ್ನು ತಮಗೆ ಕೊಡುತ್ತೇನೆ.

ಇದಾದ ಅನಂತರ ನಮ್ಮ ಲೀಡರ್ ಆಫ್ ದಿ ಅಪೋಷಿಷನ್‌ನವರು ಒಂದು ಮಾತು ಹೇಳಿದರು: ಜೈಲುಗಳನ್ನು ಸೆಲ್ಫ್ ಸಫಿಷಿಯೆಂಟು ಮಾಡುವುದರ ವಿಷಯದಲ್ಲಿ ಸರಕಾರದವರು ಗಂಭೀರವಾಗಿ ಆಲೋಚಿಸಬೇಕು ಎಂದು ಅವರು ಹೇಳಿದರು. ಪಿ.ಎಸ್.ಪಿ. ಯವರ ಕೈಯಲ್ಲಿ ಅಧಿಕಾರ ಬಂದ ಮೇಲೆ ಆ ರೀತಿಯಾಗಿ ಸೆಲ್ಫ್ ಸಫಿಷಿಯೆಂಟು ಆಗುವಂತಹ ಪ್ರೋಗ್ರಾಂ ಏನಾದರೂ ಇದೆಯೋ ಏನೋ ನನಗೆ ಗೊತ್ತಿಲ್ಲ. ಆದರೆ ಜೈಲುಗಳು ಕಮರ್ಷಿಯಲ್ ಕನ್‌ಸರ್ನ್‌ಗಳಂತೆ ನಡೆಯಬೇಕಾದ ಸಂಸ್ಥೆಗಳಲ್ಲ. ಅಲ್ಲಿ ಎಷ್ಟು ಖರ್ಚು ಹಾಕುತ್ತಾರೋ ಅದರ ಲೆಕ್ಕಪತ್ರ ಯಾವ ರೀತಿ ಇದೆ ಎನ್ನುವುದಕ್ಕೆ ತಕ್ಕಂತೆ ಒಬ್ಬ ಉದ್ಯೋಗಸ್ಥನಿದ್ದು ಅಲ್ಲಿ ಎಷ್ಟು ಖರ್ಚಾಗಿದೆ ಎನ್ನುವುದನ್ನು ನೋಡುವುದಕ್ಕೆ ಬರಬಹುದು. ಆದರೆ ಈ ಜೈಲುಗಳ ಆಡಳಿತವನ್ನು ಹೀಗೆ ನಡೆಸುವುದಕ್ಕಾಗುವುದಿಲ್ಲ. ಹೀಗಿರುವಾಗ ಇಲ್ಲಿ ಸೆಲ್ಫ್ ಸಫಿಷಿಯೆಂಟು ಆಗುವುದಕ್ಕೆ ಹೇಗೆ ಸಾಧ್ಯ ?

ಶ್ರೀ ಕೆ. ಕೆಂಚಪ್ಪ.—ನಾನು ಹೇಳಲಿಲ್ಲ. ಸಾಧ್ಯವಿದೆ ಎಂದು ಅನುಭವವಿದ್ದ ಮನುಷ್ಯರು ಹೇಳಿದರು.

ಶ್ರೀ ವೀರೇಂದ್ರ ಪಾಟೀಲ್.—ಶ್ರೀ ಮಲ್ಲಾರಾಧ್ಯರು ಕೋಲಾರ ಜಿಲ್ಲೆಯಲ್ಲಿರುವ ಜೈಲನ್ನು ಸೆಲ್ಫ್ ಸಫಿಷಿಯೆಂಟಾದ ಜೈಲನ್ನಾಗಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಏಕೆಂದರೆ ನಮ್ಮ ಸ್ಟೇಟಿನಲ್ಲಿ ಮೇಜರು ಜೈಲುಗಳು ಇರುವುದೇ ಐದಾರು. ಉಳಿದುವುಗಳೆಲ್ಲ ಲಾಕಪ್ಪುಗಳು, ಸ್ಪೆಷಲ್ ಲಾಕಪ್ಪುಗಳು ಮತ್ತು ಸಬ್ ಜೈಲುಗಳು. ಇದರಲ್ಲಿ ಯಾವ ತರಹ ಖೈದಿಗಳನ್ನು ಇಡುತ್ತಾರೆ ಎನ್ನುವುದೆಲ್ಲ ತಮಗೆಲ್ಲ ಗೊತ್ತಿರಬಹುದು. ತಾಲ್ಲೂಕು ಲಾಕಪ್ಪುಗಳಿಗೂ ಡಿಸ್ಟ್ರಿಕ್ಟ್ ಲಾಕಪ್ಪುಗಳಿಗೂ ಒಂದೇ ತರಹ ಕಾರ್ಯಕ್ರಮ ಹಾಕಿಕೊಳ್ಳಲು ಅಲ್ಲೆಲ್ಲ ವಿಧ ವಿಧವಾದ ರೀತಿಯ ಖೈದಿಗಳಿರುತ್ತಾರೆ. ಒಂದೇ ತರಹದ ಖೈದಿಗಳು ಇರುವ ವ್ಯವಸ್ಥಿತವಾದ ಗುಂಪು ಇರುವುದಿಲ್ಲ. ಹೀಗಿರುವುದರಿಂದ ಇಲ್ಲಿರುವ ಖೈದಿಗಳಿಗೆ ಶಿಕ್ಷಣವನ್ನು ಕಲಿಸುವುದು ಹೇಗೆ ಸಾಧ್ಯ? ಮತ್ತು ಯಾವ ರೀತಿಯಾದ ಟ್ರೇನಿಂಗನ್ನು ಕೊಡಬಹುದು ? ಇವೆಲ್ಲವನ್ನೂ ತಾವೇ ವಿಚಾರ ಮಾಡಿ. ಈಗ ಸೆಂಟ್ರಲ್ ಜೈಲಿನಲ್ಲಿ ಟೈಲರಿಂಗು, ವೀವಿಂಗು, ಕಾರಪೆಂಟ್ರಿ ಇವುಗಳನ್ನು ಕಲಿಸಲು ಅವಕಾಶವಿದೆ.

ಇದೂ ಅಲ್ಲದೆ ಸಬ್ ಜೈಲ್ಸ್ ಮತ್ತು ಸ್ಪೆಷಲ್ ಲಾಕಪ್ ಮೂರು ನಾಲ್ಕು ಇರಬಹುದು. ನಮ್ಮ ಸ್ಟೇಟಿನಲ್ಲಿ ಮೂರು ತಿಂಗಳೊಳಗೆ ಅಥವಾ ಅದಕ್ಕಿಂತ ಕಡಮೆ ಅವಧಿಯೊಳಗೆ ಇರುವ ಖೈದಿಗಳಿಗೆ ಯಾವ ವಿಧವಾದ ವಿದ್ಯೆಯನ್ನು ಕಲಿಸುವುದಕ್ಕೆ ಸಾಧ್ಯ? ಮತ್ತು ಯಾವ ದೊಡ್ಡ ಉದ್ಯಮವನ್ನು ತೆಗೆದುಕೊಳ್ಳು

ವುದಕ್ಕೆ ಸಾಧ್ಯ? ಇನ್ನು ಏನಾದರೂ ಕೆಲಸವನ್ನು ಕಲಿಯಬೇಕಾಗಿದ್ದರೆ ಮತ್ತು ಟ್ರೇನಿಂಗನ್ನು ಕೊಡುವ ಸಾಧ್ಯತೆ ಇದ್ದರೆ ಬೇರೆ ಮೇಜರು ಜೈಲುಗಳಲ್ಲಿ ಕೊಡುವುದಕ್ಕೆ ಸಾಧ್ಯವಿದೆ. ಆದರೆ ಅದೂ ಕೂಡ ಹಾಗೆಯೇ ವಿಚಾರ ಮಾಡಿ ನೋಡಿದರೆ ಅಲ್ಲಿರುವ ಅಂಡರ್ ಟ್ರಯಲ್ಸುಗಳಿಂದ ಕೆಲಸ ತೆಗೆದುಕೊಳ್ಳುವುದು ಸಾಧ್ಯವಿಲ್ಲ. ಮತ್ತು ಅವರಿಂದ ಕೆಲಸವನ್ನು ತೆಗೆದುಕೊಳ್ಳಬಾರದು. ಇದೇ ರೀತಿಯಾಗಿ "ಎ" ಮತ್ತು "ಬಿ" ಕ್ಲಾಸು ಪ್ರಿಸನರುಗಳಿದ್ದಾರೆ, ಇವರಿಂದ ಯಾವ ಕೆಲಸವನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏನಿದ್ದರೂ ಬರಿಯ "ಸಿ" ಕ್ಲಾಸು ಪ್ರಿಸನರುಗಳಿಂದ ಮಾತ್ರ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಇವರೂ ಕೂಡ ಎಷ್ಟು ದಿವಸಗಳಿರುತ್ತಾರೆ ಎಂದರೆ ಬಹಳ ಕಡಮೆ ಅವಧಿಯವರೆಗೆ ಇರುತ್ತಾರೆ. ಏನೋ ಲಾಂಗ್ ಟರ್ಮು ಪ್ರಿಸನರುಗಳಿದ್ದರೆ ಅವರಾಗಿಯೇ ಕೆಲಸಕ್ಕೆ ಹೋಗುತ್ತಾರೆ ಮತ್ತು ಆ ರೀತಿಯಾಗಿ ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಆಗುತ್ತದೆ.

ಒಬ್ಬ ಸದಸ್ಯರು.—"ಸಿ" ಕ್ಲಾಸು ಖೈದಿಗಳು ಎಷ್ಟು ಜನರಿದ್ದಾರೆ?

ಶ್ರೀ ವೀರೇಂದ್ರ ಪಾಟೀಲ್.—ಅವರು ಸಾಕಷ್ಟು, ಮೇಜರು ಜೈಲುಗಳಲ್ಲಿದ್ದಾರೆ. ಎಷ್ಟು ಜೈಲುಗಳಲ್ಲಿ, ಇಂಡಸ್ಟ್ರೀಸನ್ನು ಯಾವ ಯಾವುದು ನಡೆಸುವುದಕ್ಕೆ ಸಾಧ್ಯವಿದೆ ಅವನ್ನೆಲ್ಲ ನಾವು ಮಾಡುತ್ತಿದ್ದೇವೆ. ಅವು ಯಾವುವು ಎನ್ನುವುದನ್ನು ಸಂಕ್ಷೇಪವಾಗಿ ತಮ್ಮ ಮುಂದೆ ವರದಿ ಇಡುತ್ತೇನೆ. ನಮ್ಮಲ್ಲಿ ಈಗ ನಡೆಯುತ್ತಿರುವುದು, ವೀವಿಂಗು, ಕಾರಪೆಂಟ್ರಿ, ಕಾರ್ಪೆಟ್ಟು ವೀವಿಂಗು, ಜೂಟ್ ಮ್ಯಾಟ್ಸ್, ರೆಟಾನ್ ಇಂಡಸ್ಟ್ರಿ, ಕಾಯರ್ ಇಂಡಸ್ಟ್ರೀ, ರೋಪ್ ಮೇಕಿಂಗು, ಸ್ಮಿತಿ, ಟೇಲರಿಂಗು, ಪ್ರಿಂಟಿಂಗ್ ಪ್ರೆಸ್, ಬೈಂಡಿಂಗ್ ಮತ್ತು ರೂಲಿಂಗ್, ಲಾಂಡ್ರಿ, ಸ್ಪಿನಿಂಗು, ರಬ್ಬಿ ವೀವಿಂಗು, ಟೆಂಟ್ ಮೇಕಿಂಗ್ ಹೀಗೆ ಎಲ್ಲ ಉದ್ಯಮಗಳೂ ನಡೆಯುತ್ತವೆ, ಈ ಬಗ್ಗೆ ವಿಚಾರ ಮಾಡುತ್ತ ಶ್ರೀ ಮಲ್ಲಾರಾಧ್ಯರೂ ಮತ್ತು ಸಿ. ಕೆ. ರಾಜಯ್ಯ ಶೆಟ್ಟಿಯವರೂ, ಈ ಜೈಲುಗಳಲ್ಲಿ ಮ್ಯಾನುಫ್ಯಾಕ್ಚರಿಗಾಗಿ ಒದಗಿಸಿರುವ ಹಣಕ್ಕೆ ತಕ್ಕಷ್ಟು ಪ್ರತಿಫಲ ದೊರೆಯದೆ ನಷ್ಟವಾಗುತ್ತಿದೆ, ಈ ಜೈಲುಗಳಿಗಾಗಿ ಒದಗಿಸಿದ ಹಣ 4,60,000 ರೂಪಾಯಿಗಳಲ್ಲಿ ಆದಾಯ ಬಂದಿರುವುದು 3,77,000 ಈ ರೀತಿಯಾಗಿ ಲಾಸ್ ಆಗುತ್ತಿದೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ನೋಡುವವರಿಗೆ ಇದು ಹಾಗೆ ಕಾಣಬಹುದು. ಆದರೆ ನಾವು ನಾಲ್ಕು ಲಕ್ಷ ರೂಪಾಯಿಗಳಷ್ಟು ರಾ-ಮೆಟೀರಿಯಲುಗಳನ್ನು ತೆಗೆದು ಇಟ್ಟು ಈ ರಾ-ಮೆಟೀರಿಯಲ್ಸುಗಳಿಂದ ತೆಗೆದುಕೊಂಡು ಇಷ್ಟೇ ಅವಧಿಯೊಳಗೆ ಫಿನಿಷ್ಡ್ ಗುಡ್ಸ್ ತಯಾರು ಮಾಡಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ; ತಯಾರು ಮಾಡುವುದಕ್ಕೆ ತಕ್ಕ ಸೌಕರ್ಯಗಳೂ ದೊರೆಯುವುದಿಲ್ಲ. ಇಲ್ಲಿ 3,77,000 ಆದಾಯ ತೋರಿಸಿರುವುದರಲ್ಲಿ ಖರ್ಚು ವೆಚ್ಚಗಳನ್ನು ಸೇರಿಸಿಲ್ಲ; ಅವನ್ನೂ ಸೇರಿಸಿದರೆ ಇನ್ನೂ ಹೆಚ್ಚಿನ ಆದಾಯ ಬರುತ್ತದೆಯೇ ಹೊರತು ನಷ್ಟ ಬರುವುದಿಲ್ಲ. ಈ ರೀತಿಯಾಗಿ 4,60,000 ರೂಪಾಯಿಗಳಷ್ಟು ರಾ-ಮೆಟೀರಿಯಲುಗಳಿಗಾಗಿ ಇನ್‌ವೆಸ್ಟು ಮಾಡಿದರೆ ನಮಗೆ ಇನ್ನೂ 3,77,000 ರೂಪಾಯಿಗಳ ಹೆಚ್ಚು ಉತ್ಪನ್ನವಾಗುತ್ತದೆ ಎನ್ನುವ ಭಾವನೆಯಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಇಲ್ಲಿ ತಾವು ಒಂದು ವರ್ಷದ ಫಿಗರನ್ನು ಹೇಳುತ್ತೀರಿ. If you take one lakh of last year *plus* that of this year, it comes to a total loss of 1·9 lakhs.

ಶ್ರೀ ವೀರೇಂದ್ರ ಪಾಟೀಲ್.—ನಾನು ಅದನ್ನು ಹೇಳುತ್ತೇನೆ. ನಾನು ಈಗ ಹೇಳುತ್ತಿದ್ದುದು ಏನೆಂದರೆ ಇದರಲ್ಲಿ ಯಾವ ರೀತಿಯಲ್ಲಿಯೂ loss ಆಗಲು ಸಾಧ್ಯವಿಲ್ಲ. Cost of production ಏನಿದೆ ಅದರ ಮೇಲೆ ಶೇಕಡ ಹತ್ತು profit ಹಾಕಿ sale price ನಿಗದಿಮಾಡಿರುವುದರಿಂದ ಅದರಲ್ಲಿ loss ಇಲ್ಲವೆಂದು ಮಾತ್ರ ಸ್ಪಷ್ಟವಾಗಿ ಹೇಳುತ್ತೇನೆ. ವಿವರಗಳು ನನ್ನ ಹತ್ತಿರ ಇಲ್ಲದುದರಿಂದ ಹೆಚ್ಚು ಹೇಳಲು ಸಾಧ್ಯವಿಲ್ಲ ಮತ್ತು ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ.

Jail Reforms Committee ಯ ಬಗ್ಗೆ ಶ್ರೀಮಾನ್ ಮಲ್ಲಾರಾಧ್ಯರು ಹೇಳಿದರು. ಕಟ ಮೋಷನ್ ಸಹ ಕೊಟ್ಟಿದ್ದಾರೆ. ಅವರು ಮತ್ತೊಂದು ಕಮಿಟಿಯನ್ನು ಮಾಡಬೇಕೆಂದು ಹೇಳಿದರು. ಈಗಾಗಲೇ ಒಂದು ಕಮಿಟಿಯನ್ನು ಮಾಡಿದ್ದೇವು ಮತ್ತು ಅವರ recommendations ಇವೆ. ಅವುಗಳ ಪೈಕಿ ಅನೇಕ recommendations implement ಮಾಡುವುದಕ್ಕೆ ಸಾಧ್ಯವಿದೆ. ಯೋಗ್ಯವಿದ್ದಂಥ recommendations ಏನಿವೆ ಅವನ್ನು ಕಾರ್ಯಗತ ಮಾಡುವುದರ ಸಲುವಾಗಿ ಸಿದ್ಧರಿದ್ದೇವೆ ಎಂದು ಮಾತ್ರ ಹೇಳಬಯಸುತ್ತೇನೆ.

ಶ್ರೀಮಾನ್ ರಾಜಯ್ಯ ಶೆಟ್ಟರು ಅನೇಕ ವಿಚಾರಗಳನ್ನು ಬೆಂಗಳೂರು ಸೆಂಟ್ರಲ್ ಜೈಲಿನ ಬಗ್ಗೆ ಹೇಳಿದರು. ಅದರಲ್ಲಿ ಒಂದು ವಿಚಾರವನ್ನು ಹೇಳಬೇಕಾದರೆ rattan industry ಇಟ್ಟುಕೊಂಡಿದ್ದಾರೆ, instructor ಇದ್ದಾನೆ, ಏನೂ ಕೆಲಸ ಮಾಡುತ್ತಿಲ್ಲವೆಂದು ತಿಳಿಸಿದರು. ಅಲ್ಲಿ ಈಗ Rattan Instructor ಇಲ್ಲ. ಆತನು ರಿಟೈರ್ ಆಗಿದ್ದಾನೆ.

SRI C. K. RAJAIAH SETTY.—Regarding rattan industry, what I said was that there was no raw material.

ಶ್ರೀ ವೀರೇಂದ್ರ ಪಾಟೀಲ್.—ನಾವು ನಮಗೆ ಬೇಕಾಂಥ ಮಾಲನ್ನು open market ನಲ್ಲಿ ತೆಗೆದುಕೊಳ್ಳುವ ಹಾಗಿಲ್ಲ. ಅದಕ್ಕೆ ಒಂದು ಪ್ರೊಸೀಜರ್ ಇದೇ ಮಾರ್ಕೆಟ್‌ನಲ್ಲಿ ಹೋಗಿ ನಮಗೆ ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಂಡು ಬರುವಹಾಗಿಲ್ಲ. ನಮಗೆ ಏನು ಬೇಕಾಗಿದ್ದರೂ ಅದಕ್ಕೆ ಸ್ಟೋರ್ಸ್‌ಪರ್ಚೇಸ್ ಕಮಿಟಿಯವರಿಗೆ ಬರೆಯ ಬೇಕು ಮತ್ತು ಅವರ ಮುಖಾಂತರವೇ ತೆಗೆದುಕೊಳ್ಳಬೇಕು. ಅಲ್ಲದೆ rattan ನಮಗೆ ಸಿಂಗಪುರದಿಂದ ಬರಬೇಕು. ಅಲ್ಲಿಂದ ಬಂದಿಲ್ಲ. ಆದುದರಿಂದ ಆ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲ.

ಇದೇರೀತಿಯಾಗಿ ಅನೇಕ ಜನ ಸಲಹೆಗಳನ್ನು ಕೊಟ್ಟಿದ್ದಾರೆ. ಇವರೆಲ್ಲರಿಗೂ ನಾನು ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸಿ, ಜೈಲಿನ ಆಡಳಿತದಲ್ಲಿರತಕ್ಕ ಕುಂದುಕೊರತೆಗಳನ್ನು ನಿರ್ಮೂಲ ಮಾಡುವುದಕ್ಕಾಗಿ ನಾವು ಪ್ರಯತ್ನಮಾಡುತ್ತೇವೆ ಮತ್ತು ತಮ್ಮೆಲ್ಲರ ಸಹಕಾರ ಕೂಡ ಅದಕ್ಕೆ ಅಗತ್ಯವಾಗಿದೆ. ಈರೀತಿಯಾಗಿ ಕೆಲಸಮಾಡುವಂಥ ಒಂದು ಆಶ್ವಾಸನೆಯನ್ನು ಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

*Sri B. VAIKUNTA BALIGA.— Mr. Speaker, Sir, I am not unaware of the circumstance that we have been sitting here for long without even a break for tea and I am also aware that the two Demands before the House have received much attention and very many useful suggestions have been made by the members. I am indeed grateful to them for all such suggestions. But, at the same time, I must not fail to say that some members proceeded on some wrong approach based on incorrect information and insufficient information and sometimes actuated from a desire simply to criticise. Anyhow, I must congratulate the members on the very wise suggestions that they have made and I do not propose to detain the House very long. Therefore, if I am not able to answer every meticulous suggestion in great detail, I crave the indulgence of the House to be excused and I assure every member that all useful suggestions that have been made will be taken note of and will be acted upon to the extent possible.

I shall deal with the various cut motions in which various ideas have been mooted by several members most of whom are not present here now. Anyway, the cut motion given notice of by Sri Y. Veerappa is a rather composite one containing four items, perhaps, unassociated with one another to a large extent. It says:

> "steps to be taken for establishment of Panchayat or peoples courts with wider powers and higher jurisdiction and rationalisation of appointments to the subordinate judiciary, conduct of court work in the regional language and reduction of court work".

Sir, these are all very good ideas. I yield to none in my desire or the desire of the House that as far as possible every dispute should end in an amicable settlement between the parties and if they are not able to settle themselves, try to use the good offices of the third party who is disinterested, who will not demand any court fee and try to settle it with the minimum time and at the minimum cost. The feeling is that the Panchayats and the Panchayat courts should also be clothed with power. It is in that connection, I must say, that there are different patterns prevailing in different areas and attempt is being made to bring them all into uniformity. Sir, there are statutes in some of the parts. But, at the same time, courts have not been constituted. It is rather difficult to do all that overnight and it takes a little time and some of the areas where in these courts are functioning, the nature of the disputes that are referred to them over which jurisdiction is given to them, is also not full and complete. An-attempt will be made to try to do it as early as possible. In the Bombay Karnatak area, Chapter VI—Constitution and Powers of Nyaya Panchayats—this is with regard to petty disputes. In Hyderabad there is the Gram-Panchayat Act of 1956 Constitution and Power to Nyaya Panchayats. In Madras area, Panchayats are constituted under the Village Panchayat Act, 1950. In Coorg, no Panchayat court has been established and in the Bill just to be introduced very early, provision will be made and the matter will be dealt with in the near future.

Sir, the next point is with regard to appointments for subordinate judiciary. Not only the Hon'ble Member who has given notice of the cut motion but various members also have spoken. May I say, Sir, that we are all agreed and the Government yields to none in its desire to have the highest quality with regard to the recruitment to the judiciary? It is the judiciary that should administer justice impartially creating confidence. It is, therefore, absolutely necessary that the recruitment should be above board and above any criticism. But, much of it that was directed against the Government was entirely misplaced. Sir, the Government have no power to appoint any Subordinate Judiciary Officer or the Subordinate Judge, but it is the Public Service Commission that is doing it. Sri Mallaradhya was trying to trace the history and I am indeed grateful to him; he has enlightened me very much.

But the point before the House is: 'what is the procedure' is there anything for the Government being accused for being partial or for having done anything worthy of being criticised or said to be wrong? Sir, the appointment is made either by the High Court under the temporary rules or by the Public Service Commission and never by the Government. Against whom the criticism is directed? Is it directed against the integrity of the High Court or is it directed against the Public Service Commission? It would not be fair to accuse the High Court because the High Court Judges are not here and the Members of the Public Service Commission are not here. Sir, without mentioning any particular instance, to have simply said that the recruitment to the subordinate judiciary is something which is very unjust and the Government should be held responsible for that and the Government has not done its duty, is a thing which is not correct. Sir, with regard to the framing of rules for recruitment of the subordinate judiciary attempt, has been made in this direction and rules that are now temporarily framed are in force. It is in that connection that recruitment of clerks was being done. I do not know what the main idea was when this was pointed out by members. Recruitment has been done, so far as Bench Clerks are concerned, on three or four occasions.

I may say no person who is not duly qualified according to the rules has been recruited nor has it been said that the persons recruited under those rules have not done their duty properly. They were recruited under the temporary rules by Government. When permanet rules are made the Public Service Commission will make the recruitment. So far as administration of the rules by the Government is concerned, I do not think there was anything wrong so as to merit the criticism of the type that was directed against Government.

Sri B. BASAVALINGAPPA.—What about the framing of permanent rules?

Sri B. VAIKUNTA BALIGA.—I understand the impatience of my friend with regard to making permanent rules. I may assure him that permanent rules will be brought into force as early as possible and certainly within much less time than what he has got in mind.

The next point raised in the cut motion given notice of is with regard to 'conduct of court work in the regional language'. There is absolutely no doubt about the necessity for this. Today more and more encouragement is given to the regional language and certainly not to the English language but if lawyers and clients feel that they can express themselves better in English than in the regional language how is Government to prevent them from doing that' how is Government to control them? Can Government give any directive to the court, parties and lawyers that they should not speak in English, but they should speak only in the regional language?

The next point raised is 'reduction of court work'. This is associated with the idea that there are very heavy arrears in the courts. It is very easy to call something as arrears. When the President appointed a number of Judges for our High Court I was very happy about it. I expected a word of praise in appreciation of the appointments of High Court Judges. It was even said in the course of the debate that the Chief Justice who was appointed had now set matters right. I do not agree that there was anything seriously wrong before. Anyway, I am happy that with the advent of the present Chief Justice and the other Judges of the High Court the work has been proceeding very satisfactorily. It was in that connection that a shade of discontent was expressed mentioning that an adequate number of Urdu knowing Judges had not been appointed. This is not a very right type of criticism. In the first place, I am unable to agree with the argument that administration of justice in a particular language is essential. Urdu records can be translated. Cases in which the relevant records were in Urdu have been administered elsewhere. It is not as if Urdu language records are not to be found in the cases before the High Courts in Bombay and Madras. Administration of justice has never failed as a result of that.

Sri C. K. RAJAIAH SETTY.—What about the Supreme Court?

Sri B. VAIKUNTA BALIGA.—I am very glad that my friend is contributing a good point in my favour by saying that in the Supreme Court the language question does not arise. All I can say is that *mutatis mutandis* what applies to the Supreme Court will apply equally to the High Court here. Anyway, the appointments have been made and I do not think there is anything that could be said against them. I must at this stage say that the criticism that was levelled againt the Judges either of the High Court or the District Courts or the Subordinate Courts could have been avoided. If anybody has got a particular instance in his mind either of corruption or neglect of duty or miscarriage of justice, all that I would say is that he might compare it with the overall position and see whether it is a thing which usually happens in this State. There may be a stray case here or there; I do not say no, but I venture to feel that in Mysore there have never been cases of miscarriage of justice. Assuming for the purpose of argument there has been one, does it stand to reason to criticise it on the floor of this House?

Sri J. B. MALLARADHYA.—There have been a series of such cases.

Sri B. VAIKUNTA BALIGA.—I am not aware of the red rags in the past. I do not want to drag in the past. I am talking of the present. This Government is responsible only for the present and not for what might have been done in the past. If there was anything wrong in the past we cannot be held responsible for that. So it was not at all necessary to refer here to something that might have been wrong in the past unless it was with the intention of telling this Government to please take note of what happened in the past and avoid those mistakes.

Sri J. B. MALLARADHYA.—Exactly.

Sri B. VAIKUNTA BALIGA.—We have not committed any such mistakes and so that caution was not really necessary. All the same, I am grateful for the caution that has been given.

Sri K. KENCHAPPA.—What about pendency?

Sri B. VAIKUNTA BALIGA.—I am very glad that my friend the Leader of the Opposition speaks about pendency. On this particular subject I hope he will permit me to credit myself with a little knowledge. I have known of cases which have been pending even for a longer period than these and still the criticism of the type that was made here was not made in those cases. Does my friend not feel that the pendency here has been reduced now?

Sri K. KENCHAPPA.—Still there is pendency.

Sri B. VAIKUNTA BALIGA.—I should have expected a word of appreciation about what has been achieved already. I may assure that we shall certainly do better next year.

Sri K. KENCHAPPA.—With the number of Judges now available the pendency cannot be reduced further.

Sri B. VAIKUNTA BALIGA.—It is not that the Judges are not working or Government are not doing their best. So this should be received with acclamation. At the most it could be said that we should spend more and appoint more Judges. That cannot be a case of cut motion.

Then the next cut motion by Sri Srinivasa Shetty is "to discuss the failure of the Government to integrate the Judiciary, the prosecuting staff and to put up proper buildings and provide good library and furniture to courts." I wish he had added something more. These are very good subjects on which Government should bestow attention. When the Hon'ble Member speaks of 'failure of the Government to integrate the judiciary.' I do not know what was in his mind.

AN HON'BLE MEMBER.—He has gone away.

Sri B. VAIKUNTA BALIGA.—He is one of the boldest persons I have ever seen. He has not explained what he meant. That is my difficulty.

Then he refers to the prosecuting staff. It was said that the prosecuting staff was full of police people and it should not be so. This is one of the things about which debate can be carried on for months. Sir, the prosecuting staff is only leading evidence and the Magistrate is there to